ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಮಾರ್ಚ್ 19, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 307 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999





1) ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಅಂಗವಾಗಿ ದೇವಸ್ಥಾನದ ಮುಂಭಾಗ ನಿರ್ಮಾಣವಾಗಿರುವ ಪೆಂಡಾಲ್‌ನ ರಾತ್ರಿಯ ನೋಟ. 2) ಪೆಂಡಾಲ್ ಮುಂಭಾಗ ಹರಕೆ ತೀರಿಸುತ್ತಿರುವ ಹಾಗೂ ಸರದಿಯಲ್ಲಿ ನಿಂತ ಭಕ್ತರು. 3) ದೇವತೆಗೆ ಭಕ್ತಿ ಸಮರ್ಪಿಸುವ ಸಿದ್ಧತೆಯಲ್ಲಿ ಭಕ್ತರು.

## ಲೂಟಿಯ ಎಟಿಎಂ, ಪ್ರತ್ಯೇಕ ರಾಷ್ಟ್ರದ ಮಾತು

### ಶಿವಮೊಗ್ಗ ಸಮಾವೇಶದಲ್ಲಿ ಕಾಂಗ್ರೆಸ್ ವಿರುದ್ಧ ಪ್ರಧಾನಿ ಮೋದಿ ತರಾಟೆ

ಶಿವಮೊಗ್ಗ, ಮಾ. 18 - ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಹಣ ಲೂಟಿ ಮಾಡುವ ಎಟಿಎಂ ಮಾಡಿಕೊಂಡಿದೆ, ಅಭಿವೃದ್ಧಿ ಕಾರ್ಯಗಳಿಗೂ ಹಣವಿಲ್ಲದೆ ಬರೀ ಲೂಟಿಯಲ್ಲಿ ತೊಡಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಶಿವಮೊಗ್ಗದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದ ಅವರು, ಜನತೆಗೆ ನನ್ನ ನಮಸ್ಕಾರಗಳು, ಕರ್ನಾಟಕದ ಕೋಟಿ ಕೋಟಿ ಜನರಿಗೆ ನನ್ನ ನಮಸ್ಕಾರಗಳು ಎಂದು ಭಾಷಣ ಆರಂಭಿಸಿ, ಸಿಗಂದೂರು ಚೌಡೇಶ್ವರಿಯವರಿಗೆ ನಮನಗಳು ಎಂದು ತಿಳಿಸಿದರು.

ರಾಜ್ಯದಲ್ಲಿ ಸಿಎಂ, ಭವಿಷ್ಯದ ಸಿಎಂ, ಸೂಪರ್ ಸಿಎಂ, ಶ್ಯಾಡೋ ಸಿಎಂಗಳ ಆಡಳಿತವಿದೆ. ದೆಹಲಿ ಕಲೆಕ್ಷನ್‌ಗಾಗಿಯೇ ಮಂತ್ರಿ ಇದ್ದಾರೆ. ಕಾಂಗ್ರೆಸ್ ರಾಜ್ಯದ ಖಜಾನೆ ಖಾಲಿ ಮಾಡಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಸುಳ್ಳುಗಳ ಮೂಲಕ ಅಧಿಕಾರಕ್ಕೆ ಬಂತು, ಬಳಿಕ ಕೇಂದ್ರ, ಮೋದಿ ಮೇಲೆ ಆರೋಪ ಹೊರಿಸುತ್ತಿದೆ ಎಂದು ತರಾಟೆಗೆ ತೆಗೆದುಕೊಂಡರು.

ಅಧಿಕಾರಕ್ಕಾಗಿ ಕಾಂಗ್ರೆಸ್ ಏನನ್ನು ಬೇಕಾದರೂ ಮಾಡುತ್ತದೆ, ಬ್ರಿಟಿಷರ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದೆ. ಕರ್ನಾಟಕದ ಸಂಸದರೊಬ್ಬರು ರಾಜ್ಯವನ್ನೇ ಪ್ರತ್ಯೇಕ ರಾಷ್ಟ್ರ ಮಾಡುವ ಮಾತನ್ನು ಆಡುತ್ತಿದ್ದಾರೆ. ಅಂಥ ಸಂಸದರನ್ನು ವಜಾ ಮಾಡುವ ಬದಲು ಅವರನ್ನು ಬಚಾವ್ ಮಾಡಲು ಕಾಂಗ್ರೆಸ್ ಮುಂದಾಯಿತು. ಇದಕ್ಕೆ ತಕ್ಕ ಪಾಠವನ್ನು ಜನತೆ ನೀಡುವುದು ಖಚಿತ ಎಂದರು.

ನಾರಿ ಶಕ್ತಿ ನನಗೆ ಮತದಾರರಾಗಿ ಕಾಣುವುದಿಲ್ಲ, ಅವರು ದೇಶದ ಸುರಕ್ಷಾ ಕವಚ, ಕರ್ನಾಟಕದ ಮೂಲೆ ಮೂಲೆಯಲ್ಲಿ ಬಿಜೆಪಿಗೆ ಅಪಾರ ಜನ ಬೆಂಬಲ ಸಿಗುತ್ತಿದೆ.

ನಾರಿಶಕ್ತಿಯನ್ನು ಕಾಂಗ್ರೆಸ್ ಮತ್ತು ಅದರ ಸಹಯೋಗಿ ಪಕ್ಷಗಳು ನಾಶ ಮಾಡಲು ಹೊರಟಿವೆ. ಹೆಣ್ಣು ದೇವಿಯಿದ್ದಂತೆ, ಈ ನಾರಿಶಕ್ತಿಯನ್ನು ಕೆಣಕಿದವರನ್ನು ಜೂನ್ 4ರಂದು ನಾಶಪಡಿಸುವ ತೀರ್ಪು ಬರಬೇಕು ಎಂದು ಮೋದಿ ಕರೆ ನೀಡಿದರು.

ರಾಜ್ಯದ ವಿಕಾಸಕ್ಕೆ ಎನ್‌ಡಿಎ ಸರ್ಕಾರ ಕಳೆದ 10 ವರ್ಷಗಳಲ್ಲಿ ಹಲವು ಜನಪರ ಯೋಜನೆಗಳನ್ನು ನೀಡಿದೆ. ತುರ್ತು ವೈದ್ಯಕೀಯ ಚಿಕಿತ್ಸೆಯಡಿ ಕರ್ನಾಟಕದ 75 ಲಕ್ಷ ಜನರು ಸೌಲಭ್ಯ ಪಡೆದುಕೊಂಡಿದ್ದಾರೆ. ಶಿವಮೊಗ್ಗ ಜಿಲ್ಲೆ ಒಂದರಲ್ಲೇ 5 ಲಕ್ಷಕ್ಕೂ ಹೆಚ್ಚು ಆಯುಷ್ಮಾನ್ ಕಾರ್ಡ್‌ದಾರರಿದ್ದಾರೆ ಎಂದು ಪ್ರಧಾನಿ ಇದೇ ಸಂದರ್ಭದಲ್ಲಿ ಹೇಳಿದರು.

ರಾಜ್ಯದ 40 ಲಕ್ಷ ಮನೆಗಳಿಗೆ ಉಚಿತ ಎಲ್‌ಪಿಜಿ ಸಂಪರ್ಕ ಒದಗಿಸಲಾಗಿದೆ. 9 ಲಕ್ಷ ಮಂದಿ ಪ್ರಧಾನಮಂತ್ರಿ ಆವಾಸ್ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ. ಇವರಲ್ಲಿ ಬಹಳಷ್ಟು ಮಂದಿ ಎಸ್‌ಸಿ, ಎಸ್‌ಟಿ, ಒಬಿಸಿ ಜನರೂ ಇದ್ದಾರೆ. ಎಲ್ಲ ವರ್ಗದ ಜನರಿಗಾಗಿ ಬಿಜೆಪಿ ಶ್ರಮಿಸುತ್ತಿದೆ ಎಂದವರು ತಿಳಿಸಿದರು.

ತುಮಕೂರು-ಶಿವಮೊಗ್ಗ ನಡುವೆ ಆರು ಸಾವಿರ ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗುತ್ತಿದೆ, ಇದರಿಂದ ಶಿವಮೊಗ್ಗ- ಬೆಂಗಳೂರು ನಡುವಿನ (5ನೇ ಪುಟಕ್ಕೆ)



ಪ್ರಧಾನಿ ನರೇಂದ್ರ ಮೋದಿ ಅವರು ಶಿವಮೊಗ್ಗದಲ್ಲಿ ನಡೆದ ಸಮಾವೇಶದ ವೇದಿಕೆ ಸ್ಥಳಕ್ಕೆ ತೆರೆದ ಜೀಪಿನ ಮೇಲೆ ಆಗಮಿಸಿದರು. ಅವರೊಂದಿಗೆ ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹಾಗೂ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಿ.ವೈ. ರಾಘವೇಂದ್ರ ಉಪಸ್ಥಿತರಿದ್ದರು.

## ಕಳೆ ಕಟ್ಟಿದ ದುಗ್ಗಮ್ಮನ ಜಾತ್ರೆ

ದಾವಣಗೆರೆ, ಮಾ18- ಮನೆಯ ಮುಂದೆ ಪೆಂಡಾಲ್‌ಗಳು, ಗಿರ ಗಿರನೆ ತಿರುಗುವ ರುಬ್ಬುವ ಯಂತ್ರಗಳ ಸದ್ದು, ಹುಲ್ಲು ತಿನ್ನುತ್ತಾ ಮೇ ಮೇ ಎನ್ನುವ ಕುರಿಗಳು, ಮನೆಗಳಲ್ಲಿ ಬೀಗರು-ಬಂಧುಗಳ ಕಲರವ !

ಹೌದು, ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ದಾವಣಗೆರೆ ದುಗ್ಗಮ್ಮನ ಜಾತ್ರೆ ಆರಂಭವಾಗಿದೆ. ಜಾತ್ರೆಯ ಸಂಭ್ರಮ ಜೋರಾಗಿಯೇ ಇದೆ. ನಗರದ ಹಳೇ ಭಾಗದಲ್ಲಂತೂ ಜಾತ್ರೆ ಕಳೆ ಕಟ್ಟಿದೆ. ನೆಂಟರಿಷ್ಟರು ಠಿಕಾಣಿ ಹೂಡಿದ್ದಾಗಿದೆ.

ಇಂದು ದೇವತೆಗೆ ಸಿಹಿ ಅಡುಗೆ ಸಮರ್ಪಣೆ, ನಾಳೆ ಬುಧವಾರ ಬಾಡೂಟ. ಈ ಬಾಡೂಟಕ್ಕೆ ಸ್ನೇಹಿತರು, ನೆಂಟರ ಆಹ್ವಾನ ಜೋರಾಗಿಯೇ ಇದೆ. ಈ ಮಾಂಸದೂಟದ ಖರ್ಚು ಕನಿಷ್ಠ 20 ಸಾವಿರ ರೂ.ಗಳಿಂದ ಲಕ್ಷದ ಮೇಲೆಯೇ ಇರುತ್ತದೆ. ಇದು ಕೋಟ್ಯಾಂತರ ರೂಪಾಯಿಗಳ ವಹಿವಾಟೂ ಕೂಡ.

ಬರ ಹಾಗೂ ಬಿಸಿಲು ಇದ್ಯಾವುದೂ ಲೆಕ್ಕಕ್ಕೇ ಇಲ್ಲ ಎನ್ನುವಂತೆ ಜನರು ಜಾತ್ರೆಗೆ ಸಿದ್ಧಗೊಂಡಿದ್ದಾರೆ. ಈಗಾಗಲೇ ದೇವಾಲಯದ ಮುಂದೆ ಮೈಸೂರು ಅರಮನೆ ಮಾದರಿಯ ಪೆಂಡಾಲ್ ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದೆ. ಈಗಲೇ ಜನರು ಸರದಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆಯುತ್ತಿದ್ದಾರೆ.

ಇತ್ತ ಜಿಲ್ಲಾಡಳಿತ, ಮಹಾನಗರ ಪಾಲಿಕೆಯಿಂದ ಮೂಲ ಸೌಲಭ್ಯಗಳ ಕೊರತೆಯಾಗದಂತೆ ಕ್ರಮ ವಹಿಸಿದ್ದರೆ. ಪೊಲೀಸ್ ಇಲಾಖೆ ಪಾರ್ಕಿಂಗ್ ವ್ಯವಸ್ಥೆಗೆ ಕ್ರಮ ಕೈಗೊಂಡಿದೆ.



ಸೋಮವಾರ ಶ್ರೀ ದುರ್ಗಾಂಬಿಕಾ ದೇವಿಗೆ ಮಾಡಿದ್ದ ವಿಶೇಷ ಅಲಂಕಾರ



ದಾವಣಗೆರೆಯ ವಿವಿಧ ಭಾಗಗಳಲ್ಲಿ ರಂಗೇರಿದ ಕುರಿ ವ್ಯಾಪಾರ

## ನೆಲ-ಜಲ, ನಾಡು-ನುಡಿ, ಸಂಸ್ಕೃತಿಗೆ ಪ್ರೋತ್ಸಾಹ ಅಗತ್ಯ

### ಹರಿಹರದಲ್ಲಿನ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್



ಹರಿಹರ, ಮಾ.18- ನಾಡು, ನುಡಿ, ನೆಲ, ಜಲ, ಸಂಸ್ಕೃತಿಯನ್ನು ಎಲ್ಲರೂ ಪ್ರೋತ್ಸಾಹಿಸಿದಾಗ ಮಾತ್ರ ಕನ್ನಡ ಹೆಮ್ಮರವಾಗಿ ಬೆಳೆಯುವುದಕ್ಕೆ ಸಹಕಾರಿಯಾಗುತ್ತದೆ ಎಂದು ಬಾಪೂಜಿ ಸಂಸ್ಥೆಯ ನಿರ್ದೇಶಕರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದ ಶ್ರೀ ಮಿಠಾಯಿ ಡಿ ಉಜ್ಜೇಶ್ ವೇದಿಕೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಇಂದು ನಡೆದ 13 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳಿಗೆ ಕನ್ನಡದ ಬಗ್ಗೆ ಹೆಚ್ಚು ತಿಳಿಸುವಂತಹ ಕಾರ್ಯ ಆದಾಗ ಕನ್ನಡವನ್ನು ಉನ್ನತವಾಗಿ ಬೆಳೆಸಿ, ಉಳಿಸುವುದಕ್ಕೆ ಸಾಧ್ಯ ಎಂದರು.

ಬೆಂಗಳೂರಿನ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂನ ಜಿ. ವೆಂಕಟೇಶ್ ಪ್ರಧಾನ ಭಾಷಣ ಮಾಡಿ, ಕನ್ನಡ ಜಾಗೃತಿಗಾಗಿ ಬಸವೇಶ್ವರ ಸೇರಿದಂತೆ ಅನೇಕ ಮಹನೀಯರ ವಚನಗಳನ್ನು ಓದಬೇಕು, ಕೀರ್ತನೆಗಳು, ದಾಸರ ಪದಗಳು, ಭಜನೆ ತತ್ವಪದಗಳು ಇವುಗಳಿಂದ ಕನ್ನಡ ಸಾಹಿತ್ಯ ಉಳಿಯಲು ಸಹಕಾರಿಯಾಗಿದೆ. ತಾಯಿ ತನ್ನ ಮಗುವನ್ನು ಹೇಗೆ ಅಪ್ಪಿಕೊಳ್ಳುತ್ತಾರೆ ಅ (5ನೇ ಪುಟಕ್ಕೆ)

## ಕಸಾಯಿ ಖಾನೆಗಳು

## ಇ.ಐ.ಎ. ವ್ಯಾಪ್ತಿಗೆ ಬೇಡ : ಕೇಂದ್ರ

ನವದೆಹಲಿ, ಮಾ. 18 - ಕಸಾಯಿ ಖಾನೆ ಹಾಗೂ ಮಾಂಸ ಸಂಸ್ಕರಣಾ ಘಟಕಗಳನ್ನು ಪರಿಸರ ಪರಿಣಾಮ ಅಧ್ಯಯನ (ಇ.ಐ.ಎ.) ಅಧಿಸೂಚನೆ, 2006ರ ವ್ಯಾಪ್ತಿಗೆ ತರುವ ಅಗತ್ಯವಿಲ್ಲ. ಪರಿಸರಕ್ಕೆ ಸಂಬಂಧಿಸಿದಂತೆ ಇವುಗಳ ಸುರಕ್ಷತೆಗಾಗಿ ಈಗಾಗಲೇ ನಿಯಮಗಳು ಜಾರಿಯಲ್ಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಷ್ಟ್ರೀಯ ಹಸಿರು ನ್ಯಾಯಾಧೀಕರಣಕ್ಕೆ ಪ್ರಮಾಣ (5ನೇ ಪುಟಕ್ಕೆ)

## ಮೋದಿ ಸಮಾವೇಶಕ್ಕೆ ಈಶ್ವರಪ್ಪ ಗೈರು

ಶಿವಮೊಗ್ಗ, ಮಾ. 18 – ಬಂಡಾಯದ ಬಾವುಟ ಹಾರಿಸಿರುವ ಬಿಜೆಪಿಯ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ ಅವರು, ಶಿವಮೊಗ್ಗದಲ್ಲಿ ನಡೆದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಮಾವೇಶದಿಂದ ದೂರ ಉಳಿದಿದ್ದಾರೆ. ಇದು ಪಕ್ಷಕ್ಕೆ ತೀವ್ರ ಮುಜುಗರ ತಂದಿದೆ.

ಮೋದಿ ಸಮಾವೇಶಕ್ಕೆ ತೆರಳದ ಈಶ್ವರಪ್ಪ, ಹಲವಾರು ಮಠಗಳಿಗೆ ಭೇಟಿ ನೀಡಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಅವರು ಹೇಳಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿ ಹಿರಿಯ ನಾಯಕ (2ನೇ ಪುಟಕ್ಕೆ)


## ಬರ ಪರಿಹಾರವಿಲ್ಲ, ಭದ್ರಾ ಮೇಲ್ದಂಡೆಗೆ ಅನುದಾನವಿಲ್ಲ

**ಮೋದಿ ವಿರುದ್ಧ ಸಿಎಂ ಕಿಡಿ**

ಬೆಂಗಳೂರು, ಮಾ. 18 - 18,177 ಕೋಟಿ ರೂ. ಬರ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವುದಲ್ಲದೆ, ಖುದ್ದಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದರೂ, ಇದುವರೆಗೆ ನಯಾ ಪೈಸೆ ಪರಿಹಾರದ ಹಣ ಬಿಡುಗಡೆ ಆಗಿಲ್ಲ. ರಾಜ್ಯದ ರೈತರ ಮೇಲೆ ಯಾಕೆ ದ್ವೇಷ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.


ಈ ಸಂಬಂಧ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ಬರದಿಂದ ಜನರು ಗುಳೇ ಹೋಗುವುದನ್ನು ತಪ್ಪಿಸಲು ನರೇಗಾ ಯೋಜನೆಯಡಿ ಕೆಲಸದ ದಿನಗಳನ್ನು 100 ರಿಂದ 150ಕ್ಕೆ ಹೆಚ್ಚಳ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೂ (2ನೇ ಪುಟಕ್ಕೆ)

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ)
ಸಿದ್ಧಲಿಂಗೇಶ್ವರ ನಗರ, ದಾವಣಗೆರೆ – 577002
NEET/JEE/K-CET
Experienced and Renowned Faculty Team
4 Cumulative Part Tests
8 Grand Tests
Paper Discussions
Exam Tips and Tricks
CRASH COURSE 2024
Course Fee 4,000 Per Subject
Starts from 20-03-2024




Contact: 8073301604, 6361616780
Separate Hostel for Boys & Girls: Hostel Fee 7,000
B.Sc. AGRI Practical Coaching
ADMISSION FOR
B.V.Sc. (VETERINARY) | B.Sc. (AGRI) | B.Sc. (HORTICULTURE)
B.Sc. (FORESTRY) | OTHER FARMSCIENCE COURSES
Course Fee 4,000
Contact : 9535610343, 8073301604, 6361616780

CET, NEET
Crash Course
30 Days, 20 Test
Limited Seats
Fee 8,500/- only
WINNERS
CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892
9148596892



ಶ್ಯಾಬನೂರಿನಲ್ಲಿ ಇಂದು ಆಂಜನೇಯ ಸ್ವಾಮಿ ಜಾತ್ರೆ
ದಿನಾಂಕ 19.3.2024 ರ ಮಂಗಳವಾರ
ರಾತ್ರಿ 12 ಗಂಟೆಗೆ ರಥೋತ್ಸವ
ದಿನಾಂಕ 20.3.2024 ರ ಬುಧವಾರ ಬೆಲ್ಲದ ಬಂಡಿ
ದಿನಾಂಕ 21.3.2024 ರ ಗುರುವಾರ ಓಕುಳಿ
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...

# ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಗ್ರಾಮೀಣ ಭಾಗಗಳಲ್ಲಿ ಉಳಿದಿದೆ

## ಹರಪನಹಳ್ಳಿ ತಾಲ್ಲೂಕು ಕಸಾಪ ದತ್ತಿ ಉಪನ್ಯಾಸದಲ್ಲಿ ಪ್ರಾಂಶುಪಾಲ ಪ್ರಕಾಶ್



ಹರಪನಹಳ್ಳಿ, ಮಾ. 18 - ಗ್ರಾಮೀಣ ಭಾಗಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಉಳಿದಿದೆ ಎಂದು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಜಿ. ಪ್ರಕಾಶ್ ಹೇಳಿದರು

ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ದಿ. ಹೆಚ್. ಬಸಪ್ಪ ದತ್ತಿ. ದಿ. ಕೊಟ್ರಪ್ಪ ಶ್ರೀಮತಿ ಹೆಚ್. ಬಸಮ್ಮ ದತ್ತಿ. ಶಿವಮೊಗ್ಗದ ನಾಗರಾಜಪ್ಪ ದತ್ತಿ. ದಿ. ಡಾ.ಎನ್. ರಾಮಪ್ಪ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾಷೆಯೊಂದು ಜೀವಂತವಾಗಿ ಉಳಿಯುವುದು ನಮ್ಮ ಮಕ್ಕಳು ಕಲಿಯುವುದರಿಂದ, ಮಾತನಾಡುವುದರಿಂದಲೇ ಹೊರತು ಭಾಷಾಭಿಮಾನದ ವೀರಾವೇಶದ ಮಾತುಗಳು ಮತ್ತು ಉಗ್ರ ಹೋರಾಟಗಳಿಂದಲ್ಲ. ಇವತ್ತು ನಮ್ಮ ಮಕ್ಕಳಿಗೆ ಕನ್ನಡ ಕಲಿಸದೇ ಇದ್ದರೆ ಮುಂದೊಂದು ದಿನ ಕರ್ನಾಟಕದಲ್ಲಿ ಕನ್ನಡದ ಬೋರ್ಡುಗಳನ್ನು ಎಷ್ಟು ದಪ್ಪ ಅಕ್ಷರಗಳಲ್ಲಿ ಬರೆದು ಹಾಕಿದರೂ ಓದುವುದಕ್ಕೂ ಜನ ಗತಿ ಇರುವುದಿಲ್ಲ ಎಂದರು.

ಎಸ್.ಯು.ಜೆ.ಎಂ. ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಚ್. ಮಲ್ಲಿಕಾರ್ಜುನ್ ಮಾತನಾಡಿ, ನಮ್ಮ ಭಾಷೆಯ ಅಳಿವು-ಉಳಿವು ನಮ್ಮ ಮೇಲೆ ನಿಂತಿದೆಯೇ ಹೊರತು ಅನ್ಯ ಭಾಷಿಕರ ಮೇಲೆ ದ್ವೇಷ ಕಾರುವುದರಿಂದಲ್ಲ. ಎಷ್ಟೋ ವರ್ಷ ಇಲ್ಲೇ ನೆಲೆಸಿರುವವರು ಕನ್ನಡ ಕಲಿಯುವುದು ಧರ್ಮ. ಆದರೆ ಅನ್ಯಭಾಷಿಕರು ಕನ್ನಡ ಕಲಿಯುವಂತೆ, ಕನ್ನಡ ಸಂಸ್ಕೃತಿಯ ಒಳಗೆ ಬರುವಂತೆ ನಾವೇನಾದರೂ ಗಮನಾರ್ಹ ಪ್ರಯತ್ನ ಮಾಡಿದ್ದೇವೆಯೇ? ಹಾಗೆ ಪ್ರಯತ್ನ ಮಾಡಿದ್ದೂ ಅನ್ಯಭಾಷಿಕರು ಕನ್ನಡ ಕಲಿಯದಿದ್ದರೆ ಆಗ ಅದು ಅವರ ತಪ್ಪು. ಕರ್ನಾಟಕದಲ್ಲಿ ಕನ್ನಡ ಅನ್ನದ, ಅರಿವಿನ ಭಾಷೆಯಾದಾಗ ಮಾತ್ರ ಉಳಿಯುತ್ತದೆ, ಇಲ್ಲದಿದ್ದರೆ ಎಂತಹ ಉಗ್ರ ಹೋರಾಟಗಳು ನಡೆದರೂ ಅಳಿಯುತ್ತದೆ ಎಂದರು.

ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ಹೆಚ್.ಕೆ. ಚಂದ್ರಪ್ಪ ಹಾಗೂ ದತ್ತಿ ದಾನಿಗಳಾದ ಅಂಬುಜಾ ರಾಮಪ್ಪ ಮಾತನಾಡಿ, 1915ರ ಸುಮಾರಿಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು. ಆಗ ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಷತ್ತಿನ ಸ್ಥಾಪನೆಗೆ ಚಾಲನೆ ನೀಡಿದರು. ಮುಂದೆ 1935 ರಲ್ಲಿ ಈ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿಸಿದರು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಉಪನ್ಯಾಸಕರಾದ ಚೇತನ, ಬಸವರಾಜ, ರವಿಕುಮಾರ, ಗುರುಬಸವರಾಜ, ನವೀನಕುಮಾರ, ಹೊನ್ನಪ್ಪ, ಕನ್ನಡ ಸಾಹಿತ್ಯ ಪರಿಷತ್ತ್ ಗೌರವ ಕಾರ್ಯದರ್ಶಿ ಜಿ. ಮಹಾದೇವಪ್ಪ ಸೇರಿದಂತೆ ಇತರರು ಇದ್ದರು.

# ಶಿವರಾತ್ರಿ ಜಾಗರಣೆಯಲ್ಲಿ 'ಮೋಜು - ಮಸ್ತಿ' ಬೇಸರದ ಸಂಗತಿ

## ಹಿರೇಕಲ್ಮಠದ 'ಸಂಸ್ಕೃತಿ-ಸಂಸ್ಕಾರ' ಕಾರ್ಯಕ್ರಮದಲ್ಲಿ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಕಳವಳ

ಹೊನ್ನಾಳಿ,ಮಾ.18- ಪ್ರತಿಯೊಂದು ಹಬ್ಬಗಳ ಆಚರಣೆ ಹಿನ್ನೆಲೆಯನ್ನು ಸರಿಯಾಗಿ ತಿಳಿದುಕೊಂಡು ಹಬ್ಬಗಳನ್ನು ಸಂಪ್ರದಾಯಬದ್ಧವಾಗಿ ಆಚರಣೆ ಮಾಡಬೇಕು ಎಂದು ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಹಿರೇಕಲ್ಮಠದಲ್ಲಿ ಶ್ರೀ ಚನ್ನಪ್ಪಸ್ವಾಮಿ ಬೆಳ್ಳಿ ರಥೋತ್ಸವ, ಸಂಸ್ಕೃತಿ-ಸಂಸ್ಕಾರ ಹಾಗೂ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

ಇತ್ತೀಚೆಗೆ ಶಿವರಾತ್ರಿ ಹಬ್ಬದ ಜಾಗರಣೆ ಸಮಯದಲ್ಲಿ ಯುವ ಸಮೂಹ ಶಿವನ ಧ್ಯಾನ, ಜಾಗರಣೆ, ಭಜನೆ, ಪೂಜಾ ಕೈಂಕರ್ಯಗಳಲ್ಲಿ ಭಾಗಿಯಾಗದೇ ಮೋಜು-ಮಸ್ತಿ ಮಾಡುತ್ತಾ, ಇಸ್ಪೀಟ್, ಕುಡಿತ, ಸಿನಿಮಾ ನೋಡುವುದರ ಮೂಲಕ ಆಚರಣೆಗೆ ಮುಂದಾಗುತ್ತಿರುವುದು ಬೇಸರ ತಂದಿದೆ ಎಂದರು.



ನಮ್ಮ ಧರ್ಮ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಯುವ ಸಮೂಹ ಮರೆಯಬಾರದು. ಈ ನಿಟ್ಟಿನಲ್ಲಿ ಮನೆಯ ಹಿರಿಯರು ಗಮನಹರಿಸಬೇಕು ಎಂದು ದೃಷ್ಟಾಂತಗಳ ಮೂಲಕ ವಿವರಿಸಿದರು.

ಲಿಂಗೈಕ್ಯ ಶ್ರೀಗಳ ಸಂಕಲ್ಪದಂತೆ ಶ್ರೀಮಠದಲ್ಲಿ ಚನ್ನಪ್ಪಸ್ವಾಮಿ ಜನಕಲ್ಯಾಣ ಟ್ರಸ್ಟ್ ಪ್ರಾರಂಭಿಸಿ ಅದರ ಮೂಲಕ 100 ಬೆಡ್ ಆಸ್ಪತ್ರೆ, ನರ್ಸಿಂಗ್, ಫಾರ್ಮಸಿ ಕಾಲೇಜ್, ಸಿಬಿಎಸ್‌ಇ ವಸತಿಯುತ ಶಾಲೆ, ಚನ್ನಪ್ಪ ಸ್ವಾಮಿಗಳ ಸುವರ್ಣ ಮೂರ್ತಿ, ಕೋಟಿ ದೀಪೋತ್ಸವ, ಕೋಟಿ ಬಿಲ್ವಾರ್ಚನೆಗಳನ್ನು ಶ್ರೀ ಮಠದ ಭಕ್ತಾದಿಗಳ ಶ್ರೇಯೋಭಿವೃದ್ಧಿಗಾಗಿ ಯೋಜನೆಗಳನ್ನು ಹಾಕಿಕೊಳ್ಳಲಾಗಿದ್ದು, ಬರಗಾಲವಿರುವ ಪ್ರಯುಕ್ತ ಎಲ್ಲಾ ಯೋಜನೆಗಳನ್ನು ಮುಂದಿನ ವರ್ಷಕ್ಕೆ ಮುಂದೂಡಲಾಗಿದೆ ಎಂದು ಮಾಹಿತಿ ನೀಡಿದರು.

ಸನ್ಮಾನ ಸ್ವೀಕರಿಸಿ ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಎಸ್. ಸುರೇಂದ್ರಗೌಡ ಮಾತನಾಡಿ, ವಿದೇಶಿಗರು ನಮ್ಮ ಸಂಸ್ಕೃತಿ, ಆಚಾರ-ವಿಚಾರಗಳಿಗೆ ಮಾರುಹೋಗಿ ಅವುಗಳನ್ನು ಅನುಕರಣೆ ಮಾಡುತ್ತಿದ್ದರೆ ನಮ್ಮ ಭಾರತೀಯರು ಮಾತ್ರ ವಿದೇಶಿಗರ ಸಂಸ್ಕೃತಿ, ಆಚಾರ-ವಿಚಾರಗಳನ್ನು ಅನುಕರಣೆ ಮಾಡುತ್ತಿರುವುದು ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದ್ದು ಇದು ಒಳ್ಳೆಯ ಬೆಳವಣಿಗೆಯಲ್ಲವೆಂದು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ಚನ್ನೇಶ್ ಜಕ್ಕಾಳಿ ಅವರನ್ನು ಮಠದ ವತಿಯಿಂದ ಸನ್ಮಾನಿಸಲಾಯಿತು. ಚನ್ನಪ್ಪ ಸ್ವಾಮಿ ಗಾನ ಕಲಾ ಬಳಗ ಮತ್ತು ಸಂಸ್ಕೃತಿ-ಸಂಸ್ಕಾರ ತಂಡದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮಠದ ವ್ಯವಸ್ಥಾಪಕ ಎಂ.ಪಿ.ಎಂ. ಚನ್ನಬಸಯ್ಯ, ಪ್ರಧಾನ ಅರ್ಚಕ ಅನ್ನದಾನಯ್ಯ ಶಾಸ್ತ್ರಿ, ಚನ್ನಪ್ಪಸ್ವಾಮಿ ವಿದ್ಯಾಪೀಠದ ನಿರ್ದೇಶಕ ಚನ್ನೇಶಯ್ಯ, ಕಾಂಗ್ರೆಸ್ ಮುಖಂಡ ರೇವಣಸಿದ್ದಪ್ಪ, ಪೂಜಾಮರಿ ಹಾಲಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ : ಮಧ್ಯ ಪ್ರವೇಶಕ್ಕೆ ಹೈಕೋರ್ಟ್ ನಕಾರ

ಅಹಮದಾಬಾದ್, ಮಾ. 18 - ಅಹಮದಾಬಾದ್‌ನ ವಿಶ್ವವಿದ್ಯಾಲಯ ಹಾಸ್ಟೆಲ್ ಒಂದರಲ್ಲಿ ವಿದೇಶಿ ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ಮಧ್ಯ ಪ್ರವೇಶಿಸಬೇಕೆಂಬ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ತಳ್ಳಿ ಹಾಕಿದೆ. ಈ ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ಕೈಗೆತ್ತಿಕೊಳ್ಳಬೇಕು ಎಂಬ ಅರ್ಜಿಯನ್ನು ತಳ್ಳಿ ಹಾಕಿರುವ ಮುಖ್ಯ ನ್ಯಾಯಮೂರ್ತಿ ಸುನಿತಾ ಅಗರ್‌ವಾಲ್ ಹಾಗೂ ನ್ಯಾಯಮೂರ್ತಿ ಅನಿರುದ್ಧ ಪಿ. ಮಾಯಿ ಅವರನ್ನು ಒಳಗೊಂಡ ವಿಭಾಗೀಯ ಪೀಠ, ಪೊಲೀಸರು ಈ ಬಗ್ಗೆ ವಿಚಾರಣೆ ನಡೆಸಲಿದ್ದಾರೆ ಎಂದು ತಿಳಿಸಿದೆ. ಪ್ರತಿಯೊಂದು ಪ್ರಕರಣವೂ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಗಬೇಕಿಲ್ಲ. ಹೈಕೋರ್ಟ್ ಅನ್ನು ತನಿಖಾ ಸಂಸ್ಥೆಯಾಗಿ ಮಾಡಬೇಕಿಲ್ಲ ಎಂದು ಪೀಠ ತಿಳಿಸಿದೆ.

ಈ ನಡುವೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಇದುವರೆಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ.

## ಈಶ್ವರಪ್ಪ ಗೈರು

(1ನೇ ಪುಟದಿಂದ) ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಸ್ಪರ್ಧಿಸುತ್ತಿದ್ದಾರೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್‌ವಾಲ್ ಸೇರಿದಂತೆ ಹಲವು ಮುಖಂಡರು ಈಶ್ವರಪ್ಪ ಭೇಟಿ ಮಾಡಿ ಮನವೊಲಿಸುವ ಪ್ರಯತ್ನ ನಡೆಸಿದ್ದರು. ಆದರೆ, ಈಶ್ವರಪ್ಪ ತಮ್ಮ ನಿಲುವಿನಿಂದ ಹಿಂದೆ ಸರಿದಿಲ್ಲ.

## ಗುಜರಾತ್ : ಕಾಂಗ್ರೆಸ್ ಅಭ್ಯರ್ಥಿ ಕಣದಿಂದ ಹಿಂದಕ್ಕೆ

ಅಹಮದಾಬಾದ್, ಮಾ. 18 – ಗುಜರಾತ್‌ನ ಅಹಮದಾಬಾದ್ ಪೂರ್ವ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರೋಹನ್ ಗುಪ್ತ ಅವರು ಕಣದಿಂದ ಹಿಂದೆ ಸರಿದಿದ್ದಾರೆ. ಕಾಂಗ್ರೆಸ್‌ನ ರಾಷ್ಟ್ರೀಯ ವಕ್ತಾರರೂ ಆಗಿರುವ ಗುಪ್ತ ಅವರ ಹೆಸರನ್ನು ಮಾರ್ಚ್ 12ರಂದು ಪ್ರಕಟಿಸಲಾಗಿತ್ತು. ತಮ್ಮ ತಂದೆ ಗಂಭೀರವಾಗಿ ಅನಾರೋಗ್ಯ ಪೀಡಿತರಾಗಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಣದಿಂದ ಹಿಂದೆ ಸರಿಯುತ್ತಿರುವುದಾಗಿ ಗುಪ್ತ ಹೇಳಿದ್ದಾರೆ.

# ಕನ್ನಡಿಗರೂ ಪತ್ರಿಕೆ, ಪುಸ್ತಕಗಳಿಗೆ ಹಣ ಖರ್ಚು ಮಾಡಬೇಕು

## ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸಂಸ್ಕೃತ ವಿ.ವಿ. ಮಾಜಿ ಕುಲಪತಿ ಪ್ರೊ. ವೆಂಕಟೇಶ್

ಹರಿಹರ, ಮಾ. 18 - ಕೇರಳದವರಂತೆ ಕನ್ನಡಿಗರೂ ದಿನ ಪತ್ರಿಕೆ ಹಾಗೂ ಪುಸ್ತಕಗಳಿಗೆ ಹಣ ಖರ್ಚು ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕೆಂದು ಬೆಂಗಳೂರು ಸಂಸ್ಕೃತ ವಿ.ವಿ. ಮಾಜಿ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿಪ್ರಾಯಪಟ್ಟರು.

ನಗರದ ಸಿದ್ದೇಶ್ವರ ಪ್ಯಾಲೇಸ್‌ನ ಹೆಳವನಕಟ್ಟೆ ಗಿರಿಯಮ್ಮ ಹಾಗೂ ಪ್ರೊ.ಬಿ. ಕೃಷ್ಣಪ್ಪ ವೇದಿಕೆಯಲ್ಲಿ ಸೋಮವಾರ ನಡೆದ 13ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಸಮ್ಮೇಳನದ ಪ್ರಧಾನ ಭಾಷಣ ಮಾಡಿದರು.

ಕೇರಳದವರು ತಮ್ಮ ದುಡಿಮೆಯಲ್ಲಿ ಸ್ವಲ್ಪ ಪ್ರಮಾಣವನ್ನು ದಿನ ಪತ್ರಿಕೆ, ಪುಸ್ತಕಗಳನ್ನು ಖರೀದಿಸಲು ಹಣ ಮೀಸಲು ಇಡುತ್ತಾರೆ. ಇದೇ ರೀತಿ ಕನ್ನಡಿಗರೂ ಮಾಡಿದರೆ ಕನ್ನಡದ ಪ್ರಕಾಶಕರು, ಲೇಖಕರು ಬೆಳೆಯುವ ಜೊತೆಗೆ ಕನ್ನಡವೂ ಬೆಳೆಯುತ್ತದೆ ಎಂದರು.

ಮಹಾನಗರಗಳಲ್ಲಿ ಕನ್ನಡ ಭಾಷೆ ಮಾತನಾಡಿದರೆ ಕೀಳಾಗಿ ಕಾಣುವ ಸ್ಥಿತಿ ಇದೆ. ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಕನ್ನಡದ ಕಂಪು ಉಳಿದಿದೆ. ಈ ವಾತಾವರಣವನ್ನು ಬದಲಾಯಿಸುವ ಶಕ್ತಿ ಮತ್ತು ಜವಾಬ್ದಾರಿ ಕನ್ನಡಿಗರಾದ ನಮ್ಮ ಮೇಲೆಯೇ ಇದೆ ಎಂದರು.

12ನೇ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವಾಧ್ಯಕ್ಷರಾಗಿದ್ದ ಯುಗಧರ್ಮ ರಾಮಣ್ಣ ನೂತನ ಸರ್ವಾಧ್ಯಕ್ಷ ಪ್ರೊ.ಸಿ.ವಿ.ಪಾಟೀಲರಿಗೆ ಕನ್ನಡದ ಧ್ವಜವನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಮಣ್ಣ, ಶಿಕ್ಷೆ ಮತ್ತು ಶಿಕ್ಷಣ ಕನ್ನಡದಲ್ಲಿರಬೇಕು. ಸಾಧನೆ ಮಾಡುವ ಜೊತೆಗೆ ಸಾಕ್ಷಾತ್ಕಾರ ಮಾಡಿಸಬೇಕು. 1ನೇ ತರಗತಿಯಲ್ಲಿ 5 ಬಾರಿ ಫೇಲ್ ಆದ ನನ್ನಂತಹ ವ್ಯಕ್ತಿಗೆ 12ನೇ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಿದ್ದು ಸಂತಸ ಉಂಟು ಮಾಡಿದೆ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷ ಪ್ರೊ.ಸಿ.ವಿ. ಪಾಟೀಲ್ ಅವರು ಮಾತನಾಡಿ, ಒಂದು ಮೂರ್ತಿ ದೇವರಿಬ್ಬರು ಎಂಬ ಹಿರಿಮೆ ಹೊಂದಿರುವ ಹರಿಹರೇಶ್ವರ ದೇವಾಲಯ ಹರಿಹರದ ಐತಿಹಾಸಿಕ ಹಿನ್ನೆಲೆಯನ್ನು ವ್ಯಕಪಡಿಸುತ್ತದೆ ಎಂದರು.

ನಾಡಿನ ಖ್ಯಾತ ಸಾಹಿತಿಗಳಾದ ತ.ರಾ.ಸು., ನಾಡಿಗೇರ್ ಕೃಷ್ಣರಾಯರು, ದಾಶರತಿ ದೀಕ್ಷಿತರು, ಪ್ರೊ.ಎಚ್.ಎಂ.ಶಂಕರ ನಾರಾಯಣರು, ಡಾ.ಪೋಲಂಕಿ ರಾಮಮೂರ್ತಿ, ಪಿ.ಲಂಕೇಶ್‌ರ ಪೂರ್ವಜರು ಹರಿಹರದವರಾಗಿದ್ದಾರೆ ಎಂದರು.

ಹರಿಹರದಲ್ಲಿ ನದಿ ಇದ್ದರೂ ಬೇಸಿಗೆಯಲ್ಲಿ ನೀರಿನ ಕೊರತೆ ಎದುರಾಗುತ್ತಿದ್ದು ಅಗಸನಕಟ್ಟೆ ಕೆರೆಯನ್ನು ಪರ್ಯಾಯ ನೀರಿನ ಮೂಲವಾಗಿ ಅಭಿವೃದ್ಧಿಪಡಿಸಬೇಕು. ಭೈರನಪಾದ ನೀರಾವರಿ ಯೋಜನೆ ಕೈಗೂಡಬೇಕು, ಕೈಗಾರಿಕಾ ಘಟಕಗಳನ್ನು, ಜವಳಿ ಪಾರ್ಕ್, ಪವನ ವಿದ್ಯುತ್ ಸ್ಥಾವರ ಘಟಕಗಳ ಸ್ಥಾಪನೆಯಾಗಿ ನಗರವು ಸಮೃದ್ಧವಾಗಬೇಕು. ಈ ದಿಸೆಯಲ್ಲಿ ಜನಪ್ರತಿನಿಧಿಗಳು ಸರ್ಕಾರದ ಮೇಲೆ ಒತ್ತಡ ತರಲಿ ಎಂದರು.


ಸಮ್ಮೇಳನವನ್ನು ಉದ್ಘಾಟಿಸಿದ ಎಸ್.ಎಸ್. ಲೈಫ್ ಕೇರ್ ಟ್ರಸ್ಟ್‌ನ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ ಮಾತನಾಡಿ, ಕನ್ನಡ ಭಾಷೆ ಉಳಿದರೆ ಕನ್ನಡಿಗರು ಉಳಿಯುತ್ತಾರೆ. ಬೇರೆ ರಾಜ್ಯಗಳಲ್ಲಿ ಶಿಕ್ಷಣ ಪಡೆದು ಮರಳಿದ ನನ್ನ ಹಿರಿಯ ಪುತ್ರನಿಗೆ, ನನ್ನ ಕಿರಿಯ ಪುತ್ರನೇ ಗುರುವಾಗಿ ಕನ್ನಡ ಭಾಷೆಯನ್ನು ಕಲಿಸುತ್ತಿದ್ದಾನೆ ಎಂದರು.

ನಿವೃತ್ತ ಬ್ಯಾಂಕ್ ಅಧಿಕಾರಿ ಎನ್.ಟಿ. ಎರ್ರಿಸ್ವಾಮಿ ರಚಿತ 'ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಜೀವನ ಚರಿತ್ರೆ', ಸೀತಾ ಎಸ್.ನಾರಾಯಣ ರಚಿತ ಜ್ಞಾನವಾರದಿ ಪ್ರಬಮಧ, ಹೆಚ್.ಎನ್.ಶಿವಕುಮಾರ್ ರಚಿತ ಶ್ರಾವಣ ಸಂಭ್ರಮ ಕವನ ಸಂಕಲನಗಳನ್ನು ಲೋಕಾರ್ಪಣೆ ಮಾಡಲಾಯಿತು.

ಸಂಗಮ ಸಿರಿ ಸ್ಮರಣ ಸಂಚಿಕೆ ಕುರಿತು ಸಂಚಿಕೆಯ ಸಂಪಾದಕ ಪ್ರೊ. ಎಚ್.ಎ.ಭಿಕ್ಷಾವರ್ತಿ ಮಠ ಮಾತನಾಡಿದರು.

ಕಸಾಪ ಪದಾಧಿಕಾರಿಗಳಾದ ಬಿ.ದಿಳ್ಯಪ್ಪ ಸ್ವಾಗತಿಸಿದರು, ರೇವಣಸಿದ್ದಪ್ಪ ಅಂಗಡಿ ಮತ್ತು ಕೆ.ರಾಘವೇಂದ್ರ ನಾಯರಿ ನಿರೂಪಿಸಿದರು, ಜಿಗಳಿ ಪ್ರಕಾಶ್ ವಂದಿಸಿದರು. ಹಾಲಿವಾಣ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಕಂಸಾಳೆ ನೃತ್ಯ ಪ್ರದರ್ಶಿಸಿದರು.

## ಪುತಿನ್ ಆಡಳಿತ ಆರು ವರ್ಷ ಮುಂದುವರಿಕೆ



ಮಾಸ್ಕೋ, ಮಾ. 18 – ಬಹುತೇಕ ಪ್ರತಿಪಕ್ಷ ರಹಿತವಾಗಿ ನಡೆದ ರಷ್ಯಾ ಚುನಾವಣೆಯಲ್ಲಿ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಅವರು ಗೆಲುವು ಸಾಧಿಸಿದ್ದಾರೆ. ಇನ್ನೂ ಆರು ವರ್ಷ ಅವರು ಅಧಿಕಾರದಲ್ಲಿ ಮುಂದುವರೆಯಲಿದ್ದಾರೆ.

ಕಳೆದ ಕಾಲು ಶತಮಾನದಿಂದ ಪುತಿನ್ ಅಧಿಕಾರ ದಲ್ಲಿದ್ದಾರೆ. ಈಗ ಅವರು ಐದನೇ ಅವಧಿಗೆ ಅಧಿಕಾರಕ್ಕೆ ಬಂದಿದ್ದಾರೆ. ರಷ್ಯಾದ ರಾಜಕೀಯ ವ್ಯವಸ್ಥೆಯಲ್ಲಿ ಪುತಿನ್ ಸಂಪೂರ್ಣ ಹಿಡಿತ ಹೊಂದಿದ್ದಾರೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಅವರು ಅತ್ಯಧಿಕ ಮತ ಗಳಿಸಿರುವುದರಲ್ಲಿ ಯಾವುದೇ ಅಚ್ಚರಿ ಇಲ್ಲ.

ಈ ಚುನಾವಣೆಯೊಂದಿಗೆ ಪುತಿನ್, 18ನೇ ಶತಮಾನದ ನಂತರ ರಷ್ಯಾದ ಅತ್ಯಂತ ಸುದೀರ್ಘ ಕಾಲ ಆಡಳಿತ ನಡೆಸಿದ ವ್ಯಕ್ತಿಯಾಗಿದ್ದಾರೆ.

ಪುತಿನ್ ವಿರುದ್ಧ ಇಲ್ಲವೇ ಉಕ್ರೇನ್ ಸಮರದ ವಿರುದ್ಧ ಸಾರ್ವಜನಿಕವಾಗಿ ಯಾವುದೇ ಟೀಕೆ ಮಾಡದಂತೆ ನಿರ್ಬಂಧಿಸಲಾಗಿತ್ತು. ಪುತಿನ್ ಅವರ ಕಡು ವಿರೋಧಿ ಅಲೆಕ್ಸಿ ನವಲ್ನಿ ಅವರು ಕಳೆದ ತಿಂಗಳು ಆರ್ಕಟಿಕ್ ಬಂಧೀಖಾನೆಯಲ್ಲಿ ನಿಧನರಾಗಿದ್ದಾರೆ. ಪುತಿನ್ ಟೀಕಾಕಾರರು ಜೈಲಿನಲ್ಲಿದ್ದಾರೆ ಇಲ್ಲವೇ ದೇಶಭ್ರಷ್ಟರಾಗಿದ್ದಾರೆ. ಚುನಾವಣೆಯಲ್ಲಿ ಪುತಿನ್ ಶೇ.87ರಷ್ಟು ಮತಗಳನ್ನು ಗಳಿಸಿದ್ದಾರೆ ಎಂದು ತಿಳಿಸಲಾಗಿದೆ.

## ಭದ್ರಾ ಮೇಲ್ದಂಡೆಗೆ ಅನುದಾನವಿಲ್ಲ

(1ನೇ ಪುಟದಿಂದ) ಇದುವರೆಗೆ ಯಾವುದೇ ಸ್ಪಂದನೆ ದೊರೆತಿಲ್ಲ ಎಂದಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ 5,300 ಕೋಟಿ ರೂ. ಅನುದಾನ ಘೋಷಿಸಿ ವರ್ಷಗಳೇ ಕಳೆದರೂ ಇದುವರೆಗೆ ನಯಾಪೈಸೆ ರಾಜ್ಯಕ್ಕೆ ಬಂದಿಲ್ಲ. ಮಹದಾಯಿ ಮತ್ತು ಮೇಕೆದಾಟು ಯೋಜನೆಗಳಿಗೆ ಕೇಂದ್ರದ ಅನುಮತಿ ಸಿಗದೆ ನೆನೆಗುದಿಗೆ ಬಿದ್ದಿವೆ ಎಂದಿದ್ದಾರೆ.

ಕಾವೇರಿ ನದಿ ನೀರು ಹಂಚಿಕೆ ವಿಷಯದಲ್ಲಿ ಸಂಕಷ್ಟ ಸೂತ್ರ ರಚನೆಗೆ ಮಧ್ಯಸ್ಥಿಕೆ ವಹಿಸದೇ ಕೇಂದ್ರ ಸರ್ಕಾರ ನಾಡಿನ ರೈತರನ್ನು ಕೈಬಿಟ್ಟಿತ್ತು. ರಾಜ್ಯದ ರೈತರಿಗೇ ಯಾಕೆ ಈ ಸಾಲು ಸಾಲು ಅನ್ಯಾಯಗಳು? ಎಂದು ಪ್ರಶ್ನಿಸಿದ್ದಾರೆ.

# ಕೆರೆ-ಕಟ್ಟೆಗಳು ಹಳ್ಳಿಯ ಜನ - ಜಾನುವಾರುಗಳಿಗೆ ಜೀವ ನಾಡಿ

## ಹೊಸಪಾಳ್ಯ : ಕೆರೆ ಉದ್ಘಾಟನೆಯಲ್ಲಿ ಶಾರದೇಶಾನಂದ ಸ್ವಾಮೀಜಿ ಅಭಿಮತ

ಮಲೇಬೆನ್ನೂರು, ಮಾ.18- ಹೊಸಪಾಳ್ಯ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 'ನಮ್ಮೂರು ನಮ್ಮ ಕೆರೆ' ಅಭಿವೃದ್ಧಿ ಕಾರ್ಯಕ್ರಮ ದಡಿಯಲ್ಲಿ ಪುರ್ನಶ್ಚೇತನಗೊಳಿಸಿರುವ ಕರಿಯಮ್ಮ ದೇವಿ ಕೆರೆ ಹಸ್ತಾಂತರ ಹಾಗೂ ನಾಮಫಲಕ ಅನಾವರಣ ಕಾರ್ಯಕ್ರಮವು ಸೋಮವಾರ ಹರಿಹರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದ ಮಹಾರಾಜ್ ದಿವ್ಯ ಸಾನ್ನಿಧ್ಯದಲ್ಲಿ ಜರುಗಿತು.

ಈ ವೇಳೆ ಆಶೀರ್ವಚನ ನೀಡಿದ ಶ್ರೀಗಳು, ಕೆರೆ-ಕಟ್ಟೆಗಳು ಹಳ್ಳಿ ಜನರ ಹಾಗೂ ದನ-ಕರುಗಳ ಪ್ರಾಣಿ - ಪಕ್ಷಿಗಳ ಜೀವನಾಡಿಯಾಗಿದ್ದು, ಅಂತಹ ಕೆರೆಗಳನ್ನು ಗ್ರಾಮಸ್ಥರ ಸಹಭಾಗಿತ್ವದಲ್ಲೇ ಅಭಿವೃದ್ಧಿಪಡಿಸಿ, ಅದರ ನಿರ್ವಹಣೆಯ ಜವಾಬ್ದಾರಿಯನ್ನು ಅವರಿಗೆ ನೀಡುವ ಮಹತ್ತರ ಕಾರ್ಯ ಮಾಡುತ್ತಿರುವುದು ದೇಶಕ್ಕೆ ಮಾದರಿಯಾಗಿದೆ ಎಂದು ಶಾರದೇಶಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.



ಕೆರೆ ಹಸ್ತಾಂತರ ಮಾಡಿದ ಯೋಜನೆಯ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ ಮಾತನಾಡಿ, ರಾಜ್ಯದಲ್ಲಿ ಇದುವರೆಗೆ ಈ ಊರಿನ ಕೆರೆಯನ್ನೂ ಸೇರಿ 656 ಕೆರೆಗಳನ್ನು ಅಭಿವೃದ್ಧಿ ಪಡಿಸಿದ್ದೇವೆ. ನಾವು ಅಭಿವೃದ್ಧಿ ಪಡಿಸಿರುವ ಬಹುತೇಕ ಕೆರೆಗಳಲ್ಲಿ ಈಗಲೂ ಸ್ವಲ್ಪ ಪ್ರಮಾಣದಲ್ಲಿ ನೀರು ಉಳಿದಿರುವುದು ನಮಗೆ ಖುಷಿ ತಂದಿದೆ ಎಂದರು.

ಈ ಕೆರೆಯನ್ನು ಮಾದರಿ ಕೆರೆಯನ್ನಾಗಿ ಮಾಡಿ ಎಂದು ಗ್ರಾಮಸ್ಥರಿಗೆ ಲಕ್ಷ್ಮಣ ಅವರು ಮನವಿ ಮಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಹೊಳೆ ಸಿರಿಗೆರೆಯ ಎನ್.ಜಿ. ನಾಗನಗೌಡ್ರು ಮಾತನಾಡಿ, ಕೆರೆ ಅಭಿವೃದ್ಧಿ ಮಾಡಿ ನೀರು ಸಂಗ್ರಹಿಸುವುದರಿಂದ ಅಂತರ್ಜಲ ಹೆಚ್ಚಾಗಲಿದೆ ಎಂದರು.

ಕೆ.ಎನ್.ಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಂಜಮ್ಮ ಶೇಖರಪ್ಪ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿದರು.ಕರಿಯಮ್ಮ ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಗದ್ದಿಗೆಪ್ಪ ಅಧ್ಯಕ್ಷತೆ ವಹಿಸಿದ್ದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಕೃಷಿ ಮೇಲ್ವಾಚರಕ ಗಂಗಾಧರ್, ವಲಯ ಮೇಲ್ವಿಚಾರಕ ರಂಗಸ್ವಾಮಿ, ಕೆರೆ ಸಮಿತಿಯ ತಿಪ್ಪಣ್ಣ, ನಂದಿಗೌಡ್ರು, ರತ್ನಮ್ಮ, ಭಾಗ್ಯಮ್ಮ, ಶೀಲಾ, ರೇಖಮ್ಮ, ಗ್ರಾಮದ ಮುಖಂಡರಾದ ವಸಂತಪ್ಪ, ಭೀಮನಗೌಡ್ರು, ನಾಗರಾಜ್, ರವಿರಾಜ್, ಬಸಮ್ಮ, ಹಾಲಮ್ಮ, ಬಸವರಾಜ್, ಶ್ಯಾಮರಾಜ್, ಸಾಹಿತಿ ಹೆಚ್.ಪಿ. ನಾಗೇಂದ್ರಪ್ಪ, ಸೇವಾ ಪ್ರತಿನಿಧಿಗಳಾದ ಮಂಗಳಾ, ಕವಿತಾ, ಶುದ್ಧ ಘಟಕದ ಬಸವರಾಜ್, ಕೊಕ್ಕನೂರಿನ ಹನುಮಂತರಾಯ, ಕೆ.ಬೇವಿನಹಳ್ಳಿ ವಲಯ ಮೇಲ್ವಿಚಾರಕ ಮಾರುತಿಗೌಡ ಮತ್ತಿತರರು ಭಾಗವಹಿಸಿದ್ದರು.

## ಕೊಲ್ಕೊತಾ : ನಿರ್ಮಾಣ ಹಂತದ ಕಟ್ಟಡ ಕುಸಿದು ಒಂಭತ್ತು ಸಾವು

ಕೊಲ್ಕೊತಾ, ಮಾ. 18 – ಪಶ್ಚಿಮ ಬಂಗಾಳದ ಕೊಲ್ಕೊತಾದ ಪೂರ್ವ ಭಾಗದಲ್ಲಿ ನಿರ್ಮಾಣ ಹಂತದಲ್ಲಿದ್ದ ಅಕ್ರಮ ಕಟ್ಟಡವೊಂದು ಕುಸಿದು ಒಂಭತ್ತು ಜನ ಸಾವನ್ನಪ್ಪಿದ್ದಾರೆ ಹಾಗೂ ಇತರೆ 17 ಜನ ಗಾಯಗೊಂಡಿದ್ದಾರೆ.

ಕಟ್ಟಡ ಕುಸಿದ 18 ಗಂಟೆಗಳ ನಂತರವೂ ಇನ್ನೂ ಹಲವರು ಅವಶೇಷಗಳಡಿ ಸಿಲುಕಿರುವ ಕಳವಳ ಇದೆ. ಇದರಿಂದಾಗಿ ಮೃತರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಮೃತರಲ್ಲಿ ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಇಬ್ಬರು ಮಹಿಳೆಯರೂ ಸೇರಿದ್ದಾರೆ. ನಿರ್ಮಾಣ ಹಂತದಲ್ಲಿದ್ದ ಐದು ಅಂತಸ್ತಿನ ಕಟ್ಟಡ ಕುಸಿದು, ಪಕ್ಕದಲ್ಲಿದ್ದ ಗುಡಿಸಲುಗಳ ಮೇಲೆ ಬಿದ್ದಿದೆ.

## ವಿಕಸಿತ ಭಾರತದ ವಾಟ್ಸ್ಆಪ್ ಮೆಸೇಜ್‌ಗೆ ಆಕ್ಷೇಪ

ನವದೆಹಲಿ, ಮಾ. 18 – ವಿಕಸಿತ ಭಾರತ ನಿರ್ಮಾಣಕ್ಕೆ ಬೆಂಬಲಿಸುವಂತೆ ವಾಟ್ಸ್ ಆಪ್ ಮೂಲಕ ಜನರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಂದೇಶ ಬರುತ್ತಿರುವ ಬಗ್ಗೆ ಪ್ರತಿಪಕ್ಷಗಳು ಆಕ್ಷೇಪಿಸಿವೆ.

ಈ ಬಗ್ಗೆ ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು. ಈ ರೀತಿಯ ಸಂದೇಶಗಳು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು ವಿಪಕ್ಷಗಳು ಹೇಳಿವೆ.


## ಹಾವೇರಿ ಜಿಲ್ಲಾ ಜೆಡಿಎಸ್ ವಿವಿಧ ವಿಭಾಗಗಳ ಅಧ್ಯಕ್ಷರ ಆಯ್ಕೆ



ರಾಣೇಬೆನ್ನೂರು,ಮಾ.18- ಹಾವೇರಿ ಜಿಲ್ಲಾ ಜಾತ್ಯತೀತ ಜನತಾದಳದ ವಿವಿಧ ವಿಭಾಗಗಳ ಅಧ್ಯಕ್ಷರುಗಳನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಮಂಜುನಾಥ ಗೌಡ ಶಿವಣ್ಣನವರ ತಿಳಿಸಿದ್ದಾರೆ.

ಅಲ್ತಾಫ್ ನದಾಫ್ ಹಾವೇರಿ ಯುವ ಜನತಾದಳ, ಸಿದ್ದಪ್ಪ ಗುಡಿಮುಂದಲರ ನಿಟ್ಟೂರ ಪರಿಶಿಷ್ಟ ಜಾತಿ ವಿಭಾಗ, ಮಂಜುನಾಥ ಕನ್ನನಾಯ್ಕನವರ ದೇವಗಿರಿ ಪರಿಶಿಷ್ಟ ಪಂಗಡ ವಿಭಾಗ, ವಿಠಲ್ ಸುಣಗಾರ ರಾಣೇಬೆನ್ನೂರು ಹಿಂದುಳಿದ ವರ್ಗ, ಮೌನೇಶ ಮನುವಾಚಾರಿ ರಾಣೇಬೆನ್ನೂರು ಕಾರ್ಮಿಕ ವಿಭಾಗ, ಕತಾಲ್ ಸಾಬ್ ಬಣಗಾರ ಸವಣೂರ ಅಲ್ಪಸಂಖ್ಯಾತ ವಿಭಾಗ, ರಾಜಣ್ಣ ಮಾಳೋದೆ ಶಿಗ್ಗಾಂವಿ ಪದವೀಧರ ವಿಭಾಗ, ಡಾ.ಹನುಮಂತಪ್ಪ ಹತ್ತಿ ದೇವಿಹೊಸೂರು ವೈದ್ಯಕೀಯ ವಿಭಾಗ, ಗೌಸ್ ಮೊಹದ್ದೀನ್ ಆಲದಕಟ್ಟಿ ಅಕ್ಕಿಆಲೂರ ವಿಶೇಷ ಚೇತನ ವಿಭಾಗ, ಮಲ್ಲಿಕಾರ್ಜುನ ತೆಗ್ಗಿನ ಚಳಗೇರಿ ರೈತ ವಿಭಾಗ ಹಾಗೂ ರೀಟಾ ನಾಯ್ಕರ ಅಲ್ಪಸಂಖ್ಯಾತ ಕ್ರೈಸ್ತ ವಿಭಾಗದ ಅಧ್ಯಕ್ಷರುಗಳು.


## ಗುರುಮೂರ್ತಯ್ಯ ಸ್ವಾಮಿ ಹಿರೇಮಠ ನಿಧನ



ದಾವಣಗೆರೆ ಎಲ್ಲಮ್ಮನಗರ 10ನೇ ಕ್ರಾಸ್ ವಾಸಿ, ವೇ|| ಶ್ರೀ|| ಗುರುಮೂರ್ತಯ್ಯ ಸ್ವಾಮಿ ಹಿರೇಮಠ ಅವರು ದಿನಾಂಕ 18-03-2024ರ ಸೋಮವಾರ ಮಧ್ಯಾಹ್ನ 2.30ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 77 ವರ್ಷ ವಯಸ್ಸಾಗಿತ್ತು.

ಇಬ್ಬರು ಪತ್ನಿಯರು, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19-03-2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
**ಪ್ರಶಾಂತ್ ಹೋಮ್ ಇಂಡಸ್ಟ್ರೀಸ್**
7ನೇ ಕ್ರಾಸ್, ಶಾಂತಿ ನಗರ, ದಾವಣಗೆರೆ.
99457 38055, 74111 04949

## ನಿವೃತ್ತ ಇಂಜಿನಿಯರ್ ಜಿ. ಬಸವರಾಜ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 4ನೇ ಮೇನ್, 6ನೇ ಕ್ರಾಸ್ # 3521ರ ವಾಸಿ ನಿವೃತ್ತ ಇಂಜಿನಿಯರ್ ಶ್ರೀ ಜಿ. ಬಸವರಾಜ್ ಅವರು ದಿನಾಂಕ 18.03.2024ರ ಸೋಮವಾರ ರಾತ್ರಿ 11.55ಕ್ಕೆ ನಿಧನರಾದರು. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ದಿನಾಂಕ 19.03.2024ರ ಮಂಗಳವಾರ ಮಧ್ಯಾಹ್ನ 2 ಗಂಟೆಯವರೆಗೆ ಮೃತರ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ ಗ್ಲಾಸ್ ಹೌಸ್ ಪಕ್ಕದ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. 99642-28746, 99806-59759

## ಏಳನೇ ವರ್ಷದ ಪುಣ್ಯಸ್ಮರಣೆ



**ಎಂ.ಬಿ. ಸಂತೋಷ್, ಶ್ಯಾಗಲೆ**
(ಶ್ರೀಶೈಲ ಟೂರ್ಸ್ ಅಂಡ್ ಟ್ರಾವೆಲ್ಸ್)
ಜನನ : 28.9.1979, ಲಿಂಗೈಕ್ಯ : 18.3.2017

*'ಹುಲ್ಲಾದೆ ಬೆಟ್ಟದಡಿ ಮನೆಗೆ ಮಲ್ಲಿಗೆಯಾದೆ ಕಲ್ಲಾದೆ ಕಷ್ಟಗಳ ಮಳೆಯ ವಿಧಿ ಸುರಿಯೇ ಬೆಲ್ಲ ಸಕ್ಕರೆಯಾದೆ ಬಂಧು ಬಳಗದವರಿಗೆ ಮತ್ತು ಸ್ನೇಹಿತರಿಗೆ ಎಲ್ಲರಲ್ಲಿಯೂ ಒಂದಾಗಿ ಬಾಳಿದೆ.'*

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಧರ್ಮಪತ್ನಿ : ಹೆಚ್.ಸಿ. ಸುಮಾ ಮತ್ತು ಪುತ್ರಿ : ಬಿ.ಎಸ್. ಚಂದನ
ತಾಯಿ-ತಂದೆ : ಶ್ರೀಮತಿ ನೀಲಾಂಬಿಕ ಮತ್ತು ಎಂ. ಬಸವರಾಜಪ್ಪ ನಿ. ಶಿಕ್ಷಕರು.
ಶ್ರೀಮತಿ ದೀಪಾ ಎಂ.ಬಿ. ಸತೀಶ್ ಮತ್ತು ಮಗಳು : ಕಾವ್ಯಶ್ರೀ
ಶ್ರೀಮತಿ ಕುಮುದಾ ಎಂ.ಬಿ. ಸುಭಾಷ್ ಮತ್ತು ಮಗ : ಪೂರ್ವಿಕ್
ಅತ್ತೆ-ಮಾವ: ಶ್ರೀಮತಿ ಅನ್ನಪೂರ್ಣ ಮತ್ತು ಹೆಚ್. ಚಂದ್ರಶೇಖರಪ್ಪ ನಿ. ಶಿಕ್ಷಕರು.
ಶ್ರೀಮತಿ ರೂಪ, ಹೆಚ್.ಸಿ. ನರೇಂದ್ರ, ಮಗ : ಶಿವಪ್ರಸಾದ್, ಮಗಳು : ಗೌರಿ
ಶ್ರೀಮತಿ ರಂಜಿತ ಹೆಚ್.ಸಿ. ಸಂತೋಷ್, ಮಕ್ಕಳು : ಪೃಥ್ವಿ, ನರೇನ್
ಶ್ರೀಮತಿ ದ್ಯಾಮಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ತೋಳಹುಣಸೆ ಗೌಡರ ಕುಟುಂಬದವರು.
ಶ್ರೀಮತಿ ಹೂವಾಕ್ಷಿ ನಾಗರಾಜಪ್ಪ, ಮಗ : ಅರುಣ, ಮಗಳು : ಆಶಾ
ಶ್ರೀಮತಿ ಸಾವಿತ್ರ, ಬಿ.ಜಿ. ರವಿ, ಶ್ರೀಮತಿ ರೇವತಿ ಮಂಜುನಾಥ್, ಮಗ : ವಿನಯ್, ಮಗಳು : ಪ್ರೀತಿ
ಶ್ರೀಮತಿ ಭಾಗ್ಯ ಕರಿಗೌಡರು ಮಕ್ಕಳು : ಹರೀಶ್, ಆಕಾಶ್
ಶ್ರೀಮತಿ ಲತಾ ಸದಾಶಿವು, ಮಗ : ಕನಿಷ್ಕ, ಮಗಳು : ದಕ್ಷಿಕ, ಶ್ರೀಮತಿ ನಂದಾ ಸೂರಜ್
ಮಕ್ಕಳು: ಅದ್ವಿಕ್, ಅನ್ವಿಕ್, ಶ್ರೀಮತಿ ಶ್ರೀಕಾಂತ, ಅಜ್ಜಪ್ಪ ಮತ್ತು
ಶ್ರೀಮತಿ ರಶ್ಮಿ ಲೋಹಿತ್ ಕುಮಾರ್ ಮಗಳು : ರಿಷಿತ ಹಾಗೂ ಬಂಧುಗಳು


## ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಜಿ

ದಾವಣಗೆರೆ ಮಾ. 18 - ಭಾರತ ಸರ್ಕಾರದಿಂದ ದೆಹಲಿ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಸಬ್‌ಇನ್ಸ್‌ಪೆಕ್ಟರ್ ವಿವಿಧ ಹಂತದ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಅರ್ಹರಿದ್ದಾರೆ.

ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ htt://ssc.gov.in ಮತ್ತು www.ssc.kkr.kar.nic.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮಾರ್ಚ್ 28 ಕೊನೆ ದಿನ. ವಯೋಮಿತಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು 20 ರಿಂದ 25, ಎಸ್ಸಿ, ಎಸ್ಟಿ- ಒ.ಬಿ.ಸಿ, ಇ.ಎಸ್.ಎಂ ಇತರೆ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆ ಇರುತ್ತದೆ. ವಿವರಕ್ಕೆ ಸಂಪರ್ಕಿಸಿ : ಸಹಾಯವಾಣಿ – 08025502520, 0802527342 ಅಥವಾ ಉದ್ಯೋಗ ವಿನಿಮಯ ಕಚೇರಿ, 08192-259446.

## ಸಂಶೋಧನಾ ಸ್ಥಾನಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮಾ. 18 - ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸಂಶೋಧನಾ ಸ್ಥಾನಗಳಿಗೆ ಆಹ್ವಾನಿಸಲಾಗಿರುವ ಅರ್ಜಿಗಳ ಅವಧಿಯನ್ನು ಮಾ. 25 ರವರೆಗೆ ಅವಧಿ ವಿಸ್ತರಿಸಲಾಗಿದೆ. ಹಾಗೂ ವಿಭಾಗವಾರು ರಿಕ್ತ ಸ್ಥಾನ ವಿವರಗಳಿಗಾಗಿ ಮತ್ತು ಸಂಶೋಧನಾ ಸ್ಥಾನಗಳಿಗೆ ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.davangere-university.ac.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವರು ತಿಳಿಸಿದ್ದಾರೆ.


ದಾವಣಗೆರೆ ನಗರದ ದೇವತೆ
ಶ್ರೀ ದುರ್ಗಾಂಬಿಕಾ ದೇವಿ
ಜಾತ್ರಾ ಮಹೋತ್ಸವಕ್ಕೆ
ಶುಭಾಶಯಗಳು
ಜಾತ್ರೆಗೆ ಆಗಮಿಸುತ್ತಿರುವ
ಸದ್ಭಕ್ತರಿಗೆ ಹಾರ್ದಿಕ
ಸುಸ್ವಾಗತ
BAPUJI EDUCATIONAL ASSOCIATION (R) DAVANGERE ESTD. 1958
ಬಾಪೂಜಿ ವಿದ್ಯಾಸಂಸ್ಥೆ
2ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 002
ದೂರವಾಣಿ: (08192) 251302, 250659, ಇಮೇಲ್: bea_dvg@hotmail.com
ಆಡಳಿತ ಮಂಡಳಿ
ಆರ್. ರಮಾನಂದ್ ಅಧ್ಯಕ್ಷರು
ಕೆ.ಎ. ಗಿರಿಜಮ್ಮ ಉಪಾಧ್ಯಕ್ಷರು
ಎ.ಎಸ್. ನಿರಂಜನ್ ಖಜಾಂಚಿ
ಡಾ. ಎ.ಎಸ್.ವೀರಣ್ಣ ಸದಸ್ಯರು
ಪ್ರಭಾ ಮಲ್ಲಿಕಾರ್ಜುನ್ ಸದಸ್ಯರು
ಸಂಪನ್ನ ಮುತಾಲಿಕ್ ಸದಸ್ಯರು
ಡಾ. ಶಾಮನೂರು ಶಿವಶಂಕರಪ್ಪ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ
ಎಸ್.ಎಸ್. ಮಲ್ಲಿಕಾರ್ಜುನ್
ಗೌರವ ಜಂಟೀ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ


ಶಾಮನೂರಿನಲ್ಲಿ ಇಂದು ನಡೆಯಲಿರುವ ಶ್ರೀ ಆಂಜನೇಯ ಸ್ವಾಮಿ
ರಥೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸ್ವಾಗತ – ಸುಸ್ವಾಗತ
ಎಸ್.ಜಿ. ವೇದಮೂರ್ತಿ ಶಾಮನೂರು
ಸಂದೀಪ್ ಅಣಬೇರು
ಧನ್ಯಕುಮಾರ್ ಶಾಮನೂರು
ಮಂಜುನಾಥ್ ಶಾಮನೂರು

# ವಚನಾಮೃತ ಬಳಗದಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ.18- ವಚನಾಮೃತ ಬಳಗದ ವತಿಯಿಂದ ಶುಕ್ರವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸಿರಿಧಾನ್ಯದಿಂದ ಖಾದ್ಯ ತಯಾರಿಸುವ ಸ್ಪರ್ಧೆ, ಸೀರೆಯಲ್ಲಿ ವಿವಿಧ ರೀತಿಯ ಉಡುಗೆ ಸ್ಪರ್ಧೆ ಸೇರಿದಂತೆ ಆಶುಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

**ಸಿರಿಧಾನ್ಯ ಖಾದ್ಯ ಸ್ಪರ್ಧೆ:** ಈ ಸ್ಪರ್ಧೆಯಲ್ಲಿ ಕೇಕ್, ಪೊಂಗಲ್, ಮೊಸರನ್ನ, ಹಲ್ವಾ, ಪಲ್ಯ, ಪಲಾವ್, ಉಂಡೆ, ಪಾಯಸ, ಇಡ್ಲಿ, ರೊಟ್ಟಿ, ಪಾನಕ, ಮಜ್ಜಿಗೆ ಮುಂತಾದ ವಿವಿಧ ಆಹಾರಗಳನ್ನು ತಯಾರಿಸಿದ್ದರು.

**ಸೀರೆಯ ವಿವಿಧ ಉಡುಗೆ:** ಭಾರತೀಯ ಸಂಸ್ಕೃತಿಯಂತೆ ಆಕರ್ಷಕವಾಗಿ ಸೀರೆ ಧರಿಸಿ ಎಲ್ಲರ ಗಮನ ಸೆಳೆದರು.

**ಆಶುಭಾಷಣ ಸ್ಪರ್ಧೆ:** ದೈನಂದಿನ ಜೀವನದಲ್ಲಿ ಉಪಯೋಗಿಸುವ ವಸ್ತುಗಳ ಕುರಿತು ಆಯೋಜಿಸಿದ್ದ ಸ್ಪರ್ಧೆಯಲ್ಲಿ ಸದಸ್ಯರೆಲ್ಲರೂ ಭಾಗವಹಿಸಿದ್ದರು.

ಶಿಲ್ಪಾ, ತನುಜಾ, ಸರೋಜ, ಸುಮಾ ಬೇತೂರ್, ಸಂಗೀತ ಈ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಆಯೋಜಕಿ ಸೌಮ್ಯ ಸತೀಶ್, ದೇವಿಕಾ, ಸರಸ್ವತಿ, ಸುಮಾ ಬೇತೂರ್, ತೀರ್ಪುಗಾರರಾಗಿ ಪ್ರೇಮಾ ಬಾಲರಾಜ್, ಕವಿತಾ ಕೊಟ್ರಬಸಪ್ಪ, ಮಮತಾ ನಾಗರಾಜ್, ಮದುಮತಿ ಗಿರೀಶ್, ವೀಣಾ, ಶಾಂತಾ ಶಿವಶಂಕರ್ , ಜ್ಯೋತಿ ,ನಾಗರತ್ನ , , ರಾಧಾ, ಕವಿತಾ, ರೇಖಾ, ಸುಮಾ ನಾಗರಾಜ್, ಲತಾ, ರಾಜಶ್ರೀ, ಗಿರಿಜಾ ಬಿಲ್ಲಳ್ಳಿ, ಸುಜಾತ, ರೂಪಾ, ಕಲ್ಪನಾ, ರತ್ನ, ಕಾತ್ಯಾಯಿನಿ ಇತರರಿದ್ದರು.

# ಪರಿಸರ ಪೂರಕ ಕಾರ್ಯಕ್ರಮಗಳಿಗೆ ಉಚಿತ ಸಲಹೆ



ದಾವಣಗೆರೆ, ಮಾ. 18- ಈ ಜಿಲ್ಲೆಯ ಋಣ ನನ್ನ ಮೇಲಿದೆ, ಪರಿಸರ ಪೂರಕ ಕಾರ್ಯಕ್ರಮಗಳನ್ನು ರೂಪಿಸಿದರೆ ಉಚಿತ ಸಲಹೆ ಮತ್ತು ಸೇವೆ ಮಾಡಲು ಸಿದ್ಧವೆಂದು ನಿವೃತ್ತ ಜಿಲ್ಲಾಧಿಕಾರಿಯೂ ಆದ ಪರಿಸರ ಪ್ರೇಮಿ ಕೆ. ಅಮರನಾರಾಯಣ ಕರೆ ನೀಡಿದರು.

ಇಲ್ಲಿನ ಬಂಟರ ಭವನದಲ್ಲಿ ಲಯನ್ಸ್ ಕ್ಲಬ್ ಏರ್ಪಡಿಸಿದ್ದ 317 ಸಿ ಯ ಪ್ರಾದೇಶಿಕ ವಲಯ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಡು ಅವರು ಮಾತನಾಡಿದರು.

ನಾನು ಜಿಲ್ಲಾಧಿಕಾರಿಯಾಗಿದ್ದಾಗ ನೆಟ್ಟಿದ್ದ ಮರಗಳು ಇಂದು ನೆರಳು ನೀಡುತ್ತಿವೆ. ಅಲ್ಲದೆ ಕೆಲ ಗಿಡಗಳು ಹಣ್ಣುಗಳನ್ನು ನೀಡುತ್ತಿವೆ. ನನ್ನ ಜೀವನ ಸಾರ್ಥಕವಾಗಿದೆ ಎಂದರು.

ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾಧಿಕಾರಿಗಳಾಗಿದ್ದಾಗ ಬೀಜದುಂಡೆಗಳನ್ನು ಮಾಡಿ ಬಾತಿವನದಲ್ಲಿ ಹಾಕಿದ್ದೇವೆ. ಇದನ್ನು ನೋಡಿ ಆಂಧ್ರದ ತೆಲಂಗಾಣ ಸರ್ಕಾರದವರು ನನ್ನನ್ನು ಕರೆಸಿ ಸುಮಾರು 40 ಕೋಟಿ ರೂ.ಗಳ ಯೋಜನೆಯನ್ನು ರೂಪಿಸಿ ಬೀಜದುಂಡೆಗಳನ್ನು ತಯಾರಿಸಿದರು. ಇದು ನನ್ನ ಸೌಭಾಗ್ಯ ಎಂದರು.

ಮರಳು ಭೂಮಿಗೆ, ಮರುಜೀವ ಎಂಬಂತೆ ಬಂಜರು ಭೂಮಿ ಮತ್ತು ಬೆಟ್ಟಗಳಲ್ಲಿ ನಮ್ಮ ಗೋ ಗ್ರೀನ್ ಎಂಬ ಸಂಸ್ಥೆ ಬೀಜದುಂಡೆಗಳನ್ನು ಹಾಕಿ ಗಿಡ ಬೆಳೆಸುವ ಹೊಸ ಯೋಜನೆಯನ್ನು ರೂಪಿಸಿವೆ. ಇದಕ್ಕೆ ಲಯನ್ಸ್ ಕ್ಲಬ್‌ಗಳಂತಹ ಸೇವಾ ಸಂಸ್ಥೆಗಳು ಬೆಟ್ಟಗುಡ್ಡಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸಲು ಮುಂದೆ ಬಂದರೆ, ನಾನೂ ಸಹ ಬರುತ್ತೇನೆ ಎಂದರು.

ಮುಂಬರುವ ದಿನಗಳಲ್ಲಿ ವಿದ್ಯುತ್ ಮತ್ತು ಹನಿ ನೀರಿಗೂ ಪರದಾಡಬೇಕಾಗುತ್ತದೆ. ಈಗಿನಿಂದಲೇ ಮಿತವಾಗಿ ಬಳಸುವಂತೆ ಕರೆ ನೀಡಿ, ಅಡಿಕೆ ಮತ್ತು ಕಬ್ಬು ಬೆಳೆಯುವುದನ್ನು ಕಡಿಮೆ ಮಾಡದಿದ್ದರೆ ಆಹಾರಕ್ಕೂ ಪರದಾಡಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜಕಾರಣಿಗಳು ಮಾಡುವ ದಾನ ಮತ್ತು ಇತರೆ ಸೇವೆಗಳಲ್ಲಿ ಸ್ವಾರ್ಥ ಇರುತ್ತದೆ. ಆದರೆ, ಲಯನ್ಸ್ ಕ್ಲಬ್‌ನವರು ಮಾಡುವ ಕಾರ್ಯಗಳು ನಿಸ್ವಾರ್ಥತೆಯಿಂದ ಕೂಡಿರುತ್ತವೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮುಕ್ತ ಕಂಠದಿಂದ ಪ್ರಶಂಸಿಸಿದರು.

ಶ್ರೀಮತಿ ಲೀಲಾ ಓಂಕಾರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಂತೀಯ ಅಧ್ಯಕ್ಷ ಎಸ್. ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಲಯನ್ಸ್ ಕ್ಲಬ್ ಅಧ್ಯಕ್ಷ ಉಮೇಶ್ ನೀಲಿ, ಚಲನಚಿತ್ರ, ಕಿರುತೆರೆ ನಟ ಸುಜಯ್ ಹೊಳಲು, ಮೊಹಮ್ಮದ್ ಹನೀಫ್, ಶ್ರೀಮತಿ ಸಪ್ನಾ ಸುರೇಶ್, ಆರ್. ಜಿ.ಶ್ರೀನಿವಾಸ ಮೂರ್ತಿ, ಎನ್.ಸಿ. ಬಸವರಾಜ್, ರವಿಶಂಕರ್ ವಾಲಿ, ಕೆ.ಟಿ. ಮಹಾಲಿಂಗೇಶ್, ಎಂ. ಎಂ. ಭೀಮಾನಂದ ಶೆಟ್ಟಿ, ಹೆಚ್.ವಿ. ಮಂಜುನಾಥ ಸ್ವಾಮಿ, ಎನ್.ಆರ್.ನಾಗಭೂಷಣರಾವ್, ಸೋಗಿ ಮುರುಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಕ ಸಿ. ಅಜಯನಾರಾಯಣ ಪ್ರಾರ್ಥಿಸಿದರು. ಬೆಳ್ಳೂಡಿ ಶಿವಕುಮಾರ್ ಸ್ವಾಗತಿಸಿದರು. ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ವಾಸದೇವ ರಾಯ್ಕರ್ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಅಂಗವಿಕಲರಿಗೆ ತ್ರಿಚಕ್ರ ಸೈಕಲ್, ಮಹಿಳೆಯರಿಗೆ ಹೊಲಿಗೆ ಯಂತ್ರ, ವಿದ್ಯಾರ್ಥಿಗಳಿಗೆ ಸೈಕಲ್ ಹಾಗೂ ಶ್ರೀ ಅನ್ನದಾನೇಶ್ವರ ಮಠದ ಕಟ್ಟಡಕ್ಕೆ ಚೆಕ್ ವಿತರಿಸಿದರು.

# ಚುನಾವಣಾ ಬಾಂಡ್‌ನಿಂದ ಮೋದಿ ನೈತಿಕತೆ ಮುಖವಾಡ ಕಳಚಿದೆ : ಎಂ.ಬಿ. ಪಾಟೀಲ್

ಬೆಂಗಳೂರು, ಮಾ. 18 - ಚುನಾವಣಾ ಬಾಂಡ್ ವಿಷಯದಲ್ಲಿ ಸುಪ್ರೀಂಕೋರ್ಟ್ ತೆಗೆದುಕೊಂಡ ನಿರ್ಣಯದಿಂದ ಪ್ರಧಾನಿ ನರೇಂದ್ರ ಮೋದಿ ಅವರ ನೈತಿಕತೆಯ ಮುಖವಾಡ ಕಳಚಿಬಿದ್ದಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಟೀಕಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾ ಖಾವೂಂಗಾ..,ನಾ ಖಾನೆ ದೂಂಗಾ..,' ಎಂಬ ಮಾತು ಸುಳ್ಳಾಗಿದೆ, ಭ್ರಷ್ಟಾಚಾರ ನಿಗ್ರಹ ದಾಳಿಗೆ ಒಳಗಾದವರು, ಗುತ್ತಿಗೆ ಪಡೆದವರು ಬಿಜೆಪಿ ಹೆಸರಲ್ಲಿ ಚುನಾವಣಾ ಬಾಂಡ್ ಖರೀದಿಸಿರುವುದು ಬಹಿರಂಗವಾಗಿದೆ, ಮೋದಿ ಅವರ ನಿಜ ಬಣ್ಣ ಬಯಲಾಗಿದೆ ಎಂದರು.

ಚುನಾವಣಾ ಬಾಂಡ್ ರೂಪದಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಸಹಜವಾಗಿ ಒಂದಷ್ಟು ಹಣ ಬಂದಿದೆ. ಯಾವುದೇ ಇಡಿ, ಸಿಬಿಐ ಇನ್ನಿತರೆ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಬೆದರಿಕೆ ಹಾಕಿ ವಸೂಲಿ ಮಾಡಿರುವಂತದ್ದಲ್ಲ ಎಂದು ಸಮರ್ಥಿಸಿಕೊಂಡರು.

ಚುನಾವಣಾ ಬಾಂಡ್ ಆಳ ಬಹಳ ಇದೆ, ಎಲ್ಲಾ ರಾಜಕೀಯ ಪಕ್ಷಗಳ ದೇಣಿಗೆಯನ್ನೂ ತನಿಖೆಗೆ ಒಳಪಡಿಸಲಿ. ಬಾಂಡ್ ವ್ಯವಸ್ಥೆಯಿಂದ ದುರುಪಯೋಗವೇ ಜಾಸ್ತಿಯಾಗಿದೆ ಎಂದು ಹೇಳಿದರು.

# ಆಫ್ಘಾನಿಸ್ತಾನದ ನೆಲೆಯಲ್ಲಿ ಪಾಕಿಸ್ತಾನದ ದಾಳಿ ; 8 ಸಾವು

ಇಸ್ಲಾಮಾಬಾದ್, ಮಾ. 18 – ಆಫ್ಘಾನಿಸ್ತಾನದ ಒಳಗೆ ತೆಹ್ರೀಕ್ - ಎ – ತಾಲಿಬಾನ್ ಪಾಕಿಸ್ತಾನ್ ಸಂಘಟನೆಯ ಮೇಲೆ ವೈಮಾನಿಕ ದಾಳಿ ನಡೆಸಿರುವುದಾಗಿ ಪಾಕಿಸ್ತಾನ ಹೇಳಿದೆ. ಈ ಸಂಘಟನೆಯು ಆಫ್ಘಾನಿಸ್ತಾನದ ಆಡಳಿತಾರೂಢ ತಾಲಿಬಾನ್ ಜೊತೆ ಸಂಪರ್ಕ ಹೊಂದಿದೆ.

ಪಾಕಿಸ್ತಾನ ನಡೆಸಿದ ದಾಳಿಯಲ್ಲಿ ಎಂಟು ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ಆಫ್ಘಾನ್ ತಾಲಿಬಾನ್ ತಿಳಿಸಿದೆ. ಪಾಕಿಸ್ತಾನದ ರಾಯಭಾರಿಯನ್ನು ಕರೆಸಿ ಈ ಬಗ್ಗೆ ತೀವ್ರ ಪ್ರತಿಭಟನೆ ದಾಖಲಿಸಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಪಾಕಿಸ್ತಾನದ ವಿದೇಶಾಂಗ ಕಚೇರಿ, ಉಗ್ರರ ಮೇಲೆ ದಾಳಿ ನಡೆಸಲಾಗಿದೆ. ಇವರು ಕಳೆದ ಶನಿವಾರ ಸೈನಿಕ ಠಾಣೆಗಳ ಮೇಲೆ ದಾಳಿ ನಡೆಸಿ ಏಳು ಸೈನಿಕರ ಸಾವಿಗೆ ಕಾರಣರಾಗಿದ್ದರು ಎಂದು ಹೇಳಿದೆ.

ತೆಹ್ರೀಕ್ ಎ ತಾಲಿಬಾನ್ ಸಂಘಟನೆಯ ಉಗ್ರರು ಆಫ್ಘಾನಿಸ್ತಾನದಲ್ಲಿದ್ದಾರೆ ಎಂದು ಪಾಕಿಸ್ತಾನ ಆರೋಪಿಸುತ್ತಾ ಬಂದಿದೆ.

# ಬಾಲಕನ ಮೇಲೆ ಅತ್ಯಾಚಾರ ಎಸಗಿದ ವ್ಯಕ್ತಿಗೆ 20 ವರ್ಷ ಜೈಲು ಶಿಕ್ಷೆ

ದಾವಣಗೆರೆ, ಮಾ.18- ಬಾಲಕನ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಎಫ್.ಟಿ.ಎಸ್.ಸಿ-1 ನ್ಯಾಯಾಲಯ 20ವರ್ಷ ಜೈಲು ಶಿಕ್ಷೆ ಹಾಗೂ 25 ಸಾವಿರ ರೂ.ಗಳ ದಂಡ ವಿಧಿಸಿದೆ. ನಗರದ ನಿವಾಸಿ ಆಂಜನೇಯ ಅಲಿಯಾಸ್ ಅನು ಶಿಕ್ಷೆಗೊಳಗಾದವ. ಬಾಲಕನ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ 2022ರಲ್ಲಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖಾಧಿಕಾರಿ ಎಂ.ಆರ್. ಚೌಬೆ ತನಿಖೆ ನಡೆಸಿ ದೋಷರೋಪಣಾ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶ ಎನ್. ಶ್ರೀಪಾದ್ ಅಪರಾಧಿಗೆ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಸಂತ್ರಸ್ಥ ಬಾಲಕನಿಗೆ ಸರ್ಕಾರದಿಂದ 6 ಲಕ್ಷ ರೂ. ಪರಿಹಾರ ನೀಡುವಂತೆಯೂ ಆದೇಶದಲ್ಲಿ ತಿಳಿಸಿದ್ದಾರೆ. ಸರ್ಕಾರಿ ವಕೀಲರಾದ ಸುನಂದ ಮಡಿವಾಳರ್ ವಾದ ಮಂಡಿಸಿದ್ದರು.

# ಸಿಜಿ ಆಸ್ಪತ್ರೆ ಮೇಲ್ಛಾವಣೆ ಕುಸಿತ ಖಂಡಿಸಿ, ಮೂಲಭೂತ ಸೌಲಭ್ಯ ಕಲ್ಪಿಸಲು ಆಗ್ರಹ




ದಾವಣಗೆರೆ, ಮಾ. 18- ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯ ಮೇಲ್ಛಾವಣೆ ಕುಸಿತ ಖಂಡಿಸಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ ಎಸ್‌ಯುಸಿಐ (ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯ) ಪಕ್ಷದ ನೇತೃತ್ವದಲ್ಲಿ ಆಸ್ಪತ್ರೆ ಮುಂಭಾಗದಲ್ಲಿ ನಿನ್ನೆ ಪ್ರತಿಭಟನೆ ನಡೆಸಲಾಯಿತು.

ಆಸ್ಪತ್ರೆ ಮೇಲ್ಛಾವಣೆ ಕುಸಿತ ಜನರಲ್ಲಿ ಆತಂಕ ಸೃಷ್ಟಿಸಿದ್ದು, ಜಿಲ್ಲೆ, ಹೊರ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಕೆಳ, ಮಧ್ಯಮ ವರ್ಗ, ಬಡವರು, ಕಾರ್ಮಿಕರಿಗೆ ಆರೋಗ್ಯ ಸೇವೆ ಒದಗಿಸುವಲ್ಲಿ ಆಸರೆಯಾಗಿರುವ ಜಿಲ್ಲಾಸ್ಪತ್ರೆ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ ಎಂದು ಪ್ರತಿಭಟನಾಕಾರರು ದೂರಿದರು. ಸರಿಯಾದ ಚಿಕಿತ್ಸೆ ಸಿಗದೇ, ಸಿಬ್ಬಂದಿ ಕೊರತೆ ಎದುರಿಸುತ್ತಿದ್ದು, ಇಂತಹ ಪರಿಸ್ಥಿತಿಯಲ್ಲಿ ಸುಮಾರು ಅರ್ಧ ಶತಮಾನದ ಹಳೆಯದಾದ ಈ ಆಸ್ಪತ್ರೆಯ ಮೇಲ್ಛಾವಣೆ ಕುಸಿದಿರುವುದು ನಿಜಕ್ಕೂ ಆತಂಕಕಾರಿ ವಿಚಾರವಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು.

ದಾವಣಗೆರೆ ಜನತೆಯ ಬಹುದಿನಗಳ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯ ಕನಸು ಕನಸಾಗಿಯೇ ಉಳಿದಿದೆ. ಸರ್ಕಾರದ ಜನವಿರೋಧಿ ನೀತಿಗಳಿಂದಾಗಿ ಕೇವಲ ಉಳ್ಳವರ ಪಾಲಾಗಿವೆ. ಬಡವರ ಪಾಲಿಗೆ ಆರೋಗ್ಯ ಗಗನ ಕುಸುಮವಾಗಿದೆ. ಕೂಡಲೇ ಜಿಲ್ಲಾಸ್ಪತ್ರೆಗೆ ಅಗತ್ಯವಿರುವ ಪರಿಕರಗಳು, ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಮಂಜುನಾಥ್ ಕೈದಾಳೆ, ಬುಳ್ಳಾಪುರದ ಹನುಮಂತಪ್ಪ, ಎಂ.ಆರ್. ಹಿರೇಮಠ, ಮಂಜುನಾಥ್ ಕುಕ್ಕುವಾಡ, ಟಿವಿಎಸ್ ರಾಜು, ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ಭಾರತಿ, ಪರಶುರಾಮ್, ಹರಿಪ್ರಸಾದ್, ಗುರು, ಮಮತಾ, ಪೂಜಾ, ಕಾವ್ಯ, ಕವಿತಾ, ಸುಮನ್ ಮತ್ತಿತರರು ಭಾಗವಹಿಸಿದ್ದರು.

## ಚುನಾವಣೆ

ಚುನಾವಣಾ ಆಯೋಗ
ಚುನಾವಣೆ ದಿನಾಂಕ
ಪ್ರಕಟಿಸಿದ್ದು ಆಯಿತು
ಇನ್ನು ಎಲ್ಲಾ ಪಕ್ಷಗಳ
ರಾಜಕಾರಣಿಗಳು; ಮುಖಂಡರು
ಎಲ್ಲಾ ಕಡೆಯೂ
ಹೊಸ ಫೋಜುಗಳನ್ನು ಕೊಡುತ್ತಾ
ಚುನಾವಣೆಗೆ ಚಲಾವಣೆ ಮಾಡುತ್ತಾ
ಮಾಧ್ಯಮಗಳ ಮುಂದೆ
ಸತ್ಯವಂತರು; ಪ್ರಾಮಾಣಿಕರು ಎಂದು
ಮುಖ ತೋರಿಸುತ್ತಾ
ಮತಕ್ಕಾಗಿ ; ಗೆಲುವಿಗಾಗಿ
ತಂತ್ರ- ಮಂತ್ರಗಳ ಪಿತೂರಿ
ದೇವಾಲಯಗಳ ದರ್ಶನ
ಕಾವಿಯವರು ಕಂಡೊಡನೆಯೇ
ಕಾಲಿಗೆ ಬಿದ್ದು
ಭರವಸೆಯ ನೀಡುತ್ತಾ
ಬರುತ್ತಿದ್ದಾರೆ ನಿಮ್ಮ ಬಳಿಗೆ
ಎಚ್ಚರ ಬಲು ಎಚ್ಚರ ಮತದಾರರೇ
ಜಾಗೃತರಾಗಿ ! ಮತ ಚಲಾಯಿಸಿ !!

ಕಾವೇರಿ ನೀರನ್ನು ಬಿಟ್ಟು
ಬೆಳೆಗೆ ವಿದ್ಯುತ್ ಗೆ
ಖೋತಾ ಕೊಟ್ಟು
ಆರ್ಥಿಕ ನೀತಿಯ ಗಾಳಿಗೆ ತೂರಿ
ಹಣದ ಚೀಲಗಳ ಹಿಡಿದುಕೊಂಡು
ಮನೆ ಮನೆಯ ತಿರುಗುತ್ತಿದ್ದಾರೆ
ಏನೆಲ್ಲಾ ಮಾಡುತ್ತಿದ್ದಾರೆ
ಸ್ವಾರ್ಥಕ್ಕಾಗಿ; ಅಧಿಕಾರಕ್ಕಾಗಿ
ಮೋಜು- ಮಸ್ತಿಯಲ್ಲಿ
ಮೈ ಮರೆತು ಕುಣಿದು ಕುಪ್ಪಳಿಸುತ್ತಾ
ಬರುತ್ತಿದ್ದಾರೆ
ಎಚ್ಚರ ಬಲು ಎಚ್ಚರ
ಮತದಾರರೇ !
ಜಾಗೃತರಾಗಿ ಮತ ಚಲಾಯಿಸಿ !

ಧರ್ಮ; ಸಂಸ್ಕೃತಿ; ಮೌಲ್ಯಗಳ ತೊರೆದು
ಕುರುಡು ಕಾಂಚಣವ ಹಿಡಿದು
ಖಾದಿ ಉಡುಗೆಯ ತೊಟ್ಟು
ಮಳ್ಳು ಮಂದಿಗೆ ಸುಳ್ಳು ಹೇಳಲು
ಪಂಗನಾಮವ ಹಾಕಿ ಹೋಗಲು
ಬರುತ್ತಿದ್ದಾರೆ
ಎಚ್ಚರ ಬಲು ಎಚ್ಚರ
ಮತದಾರರೇ !
ಜಾಗೃತರಾಗಿ ಮತ ಚಲಾಯಿಸಿ !!

**- ಜೆಂಬಿಗಿ ಮೃತ್ಯುಂಜಯ,** ದಾವಣಗೆರೆ.

# ಚಿತ್ರಕಿ ಶಿವಕುಮಾರ್‌ರಿಂದ ವಚನ ಗಾಯನ



ದಾವಣಗೆರೆ, ಮಾ. 18- ಮಹಾಶಿವರಾತ್ರಿ ಪ್ರಯುಕ್ತ ಬಳ್ಳಾರಿ ಸಿದ್ದಮ್ಮ ಪಾರ್ಕ್‌ನಲ್ಲಿ ಚಿತ್ರಕಿ ಶಿವಕುಮಾರ್ ಅವರು ಬಸವಣ್ಣ ಹಾಗೂ ಶಿವಯೋಗಿ ಸಿದ್ಧರಾಮೇಶ್ವರರ ವಚನಗಳನ್ನು ಹಾಡಿದರು.

# ಪ್ರಧಾನಿ ವಾಯುಪಡೆ ಹೆಲಿಕಾಪ್ಟರ್ ಬಳಸಿದ್ದಕ್ಕೆ ದೂರು ದಾಖಲು

ನವದೆಹಲಿ, ಮಾ. 18 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಆಂಧ್ರ ಪ್ರದೇಶದಲ್ಲಿ ನಡೆದ ಚುನಾವಣಾ ಸಮಾವೇಶದಲ್ಲಿ ಪಾಲ್ಗೊಳ್ಳಲು ವಾಯುಪಡೆಯ ಹೆಲಿಕಾಪ್ಟರ್ ಬಳಸುವ ಮೂಲಕ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸಂಸದ ಸಾಕೇತ್ ಗೋಖಲೆ ದೂರು ದಾಖಲಿಸಿದ್ದಾರೆ.

ಚುನಾವಣಾ ಪ್ರಚಾರಕ್ಕಾಗಿ ಅಧಿಕೃತ ವಾಹನಗಳನ್ನು ಬಳಸುವುದರ ಮೇಲೆ ನಿಷೇಧವಿದೆ. ಹೀಗಿರುವಾಗ ಅಧಿಕೃತ ವಾಯುಪಡೆಯ ಹೆಲಿಕಾಪ್ಟರ್ ಬಳಸಿರುವುದು ನೀತಿ ಸಂಹಿತೆಯ ಉಲ್ಲಂಘನೆ ಎಂದವರು ಹೇಳಿದ್ದಾರೆ.

# ಹರಿಹರದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇಂದು

ಹರಿಹರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ಜಿಲ್ಲಾ ಮತ್ತು ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆಯುತ್ತಿರುವ 13ನೇ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಇಂದು ಬೆಳಗ್ಗೆ 9 ಗಂಟೆಗೆ ಶ್ರೀನಿಧಿ ಕೆ. ಗಿರಿಜಾಂಬ ಅವರಿಂದ ವೀಣಾವಾದನ ಹಾಗೂ ಗಾನ ಲಹರಿ ವಿದ್ಯಾಲಯದಿಂದ ಸುಗಮ ಸಂಗೀತ ಆಯೋಜಿಸಲಾಗಿದೆ.

9-30 ಕ್ಕೆ ಕವಿಗೋಷ್ಠಿ ಅಧ್ಯಕ್ಷತೆ : ಸಾಹಿತಿ ಜೆ. ಕಲೀಂಬಾಷಾ, ಆಶಯ ನುಡಿ : ಕವಿ ಕೆ.ಪಿ. ತಾರೇಶ್ ಅಣಬೇರು. ಬೆಳಗ್ಗೆ 10-30 ಕ್ಕೆ ಗೋಷ್ಠಿ 5 'ಸಾಂಸ್ಕೃತಿಕ ನಾಯಕ ವಿಶ್ವ ಗುರುಬಸವಣ್ಣ' ಮಠಾಧೀಶ್ವರರ ವಿಶೇಷ ಚಿಂತನ, ಮಂಥನ, ಕಾಗಿನಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮಿಗಳು, ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳು, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳು, ನಂದಿಗುಡಿ ಜಗದ್ಗುರು ಶ್ರೀ ಸಿದ್ದರಾಮೇಶ್ವರ ಸ್ವಾಮಿಗಳು, ಹೊಸಳ್ಳಿ ವೇಮನ ಮಠದ ಶ್ರೀ ವೇಮಾನಂದ ಸ್ವಾಮಿಗಳು, ಯಲವಟ್ಟಿ ಯೋಗಾನಂದ ಸ್ವಾಮಿಗಳು.

ಮಧ್ಯಾಹ್ನ 12 ಗಂಟೆಗೆ ಗೋಷ್ಠಿ -6. ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ. ಆಶಯ ನುಡಿ ಡಾ ಪಿ. ಶಿವಲಿಂಗಪ್ಪ ಚಿತ್ರದುರ್ಗ, ಗೌರವ ಉಪಸ್ಥಿತಿ ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಇತರರು. ಮಧ್ಯಾಹ್ನ 1-30 ಕ್ಕೆ ಗೋಷ್ಠಿ- 7. 'ಮಧ್ಯ ಕರ್ನಾಟಕ ಚಳವಳಿಯ ಸ್ವರೂಪಗಳು' ಅಧ್ಯಕ್ಷತೆ ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ, 'ರೈತ, ಕಾರ್ಮಿಕ ಚಳವಳಿ' ಪತ್ರಕರ್ತ ಬಿ.ಎನ್. ಮಲ್ಲೇಶ್, ಸಾಮಾಜಿಕ ಸಾಂಸ್ಕೃತಿಕ ಚಳವಳಿ ಪ್ರಾಚಾರ್ಯ ಡಾ. ದಾದಾಪೀರ್ ನವಿಲೇಹಾಳ್, 'ಕನ್ನಡ ಪರ ಚಳವಳಿಗಳು' ಸಾಹಿತಿ ಡಾ. ಆನಂದ್ ಋಗ್ವೇದಿ ವಿಷಯ ಮಂಡನೆ ಮಾಡಲಿದ್ದಾರೆ.

ಮಧ್ಯಾಹ್ನ 3-30 ಕ್ಕೆ ಬಹಿರಂಗ ಅಧಿವೇಶನ. ಅಧ್ಯಕ್ಷತೆ ಜಿಲ್ಲಾ ಕಸಾಪ ಅಧ್ಯಕ್ಷ ಬಿ ವಾಮದೇವಪ್ಪ. ನಿರ್ಣಯ ಮಂಡನೆ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಗೌರವ ಕಾರ್ಯದರ್ಶಿಗಳು ದಿಳ್ಳೆಪ್ಪ, ರೇವಣಸಿದ್ದಪ್ಪ, ಸಂಘಟನಾ ಕಾರ್ಯದರ್ಶಿಗಳು ಸಿ.ಜೆ. ಜಗದೀಶ್, ಜಿಗಳಿ ಪ್ರಕಾಶ್, ಸಹ ಕಾರ್ಯದರ್ಶಿಗಳಾದ ಇ.ಎಂ. ಮಂಜುನಾಥ್, ಕೆ.ಎಸ್. ವೀರೇಶ್ ಪ್ರಸಾದ್, ತಾಲ್ಲೂಕು ಅಧ್ಯಕ್ಷರಾದ ಸುಮತಿ ಜಯ್ಯಪ್ಪ, ಡಿ.ಎಂ. ಮಂಜುನಾಥಯ್ಯ, ಎಲ್.ಜಿ. ಮಧುಕುಮಾರ್, ಜಿ. ಮುರುಗೇಶಪ್ಪ, ಕೆ. ಸುಜಾತಮ್ಮ, ಡಿ.ಎಂ. ಹಾಲಾರಾಧ್ಯ.

ಸಂಜೆ 4 ಗಂಟೆಗೆ ಸಾಧಕರಿಗೆ ಸನ್ಮಾನ: ಅಧ್ಯಕ್ಷತೆ ಜಿಲ್ಲಾಧಿಕಾರಿ ಡಾ ಎಂ.ವಿ. ವೆಂಕಟೇಶ್, ಸನ್ಮಾನ ದಾವಿವಿ ಉಪಕುಲಪತಿ ಪ್ರೊ. ಬಿ.ಡಿ. ಕುಂಬಾರ. ಮುಖ್ಯ ಅತಿಥಿಗಳು ಜಿಪಂ ಸಿಇಓ ಸುರೇಶ್ ಇಟ್ನಾಳ್ ಇತರರು, ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜೀ, ಡಾ. ಎಸ್. ಹೆಚ್. ಪ್ಯಾಟಿ, ಪ್ರೊ ಎಂ.ಬಸವರಾಜ್, ಡಾ ಡಿ.ಡಿ. ಸಿಂದಗಿ, ಟಿ.ವಿ. 9 ರಾಮು ಸೇರಿದಂತೆ 31 ಜನರಿಗೆ ವಿವಿಧ ರಂಗಗಳಲ್ಲಿ ಸೇವೆಯನ್ನು ಸಲ್ಲಿಸಿರುವ ಮಹನೀಯರಿಗೆ ಸನ್ಮಾನ.

ಸಂಜೆ 5-30 ಕ್ಕೆ ಸಮಾರೋಪ ಸಮಾರಂಭ. ಅಧ್ಯಕ್ಷತೆ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಸಮಾರೋಪ ಭಾಷಣ ಬೆಂಗಳೂರಿನ ಪ್ರಾಧ್ಯಾಪಕರಾದ ಡಾ ಎಂ.ಎಸ್. ಆಶಾದೇವಿ, ಸಮ್ಮೇಳನಾಧ್ಯಕ್ಷ ಪ್ರೊ ಸಿ.ವಿ ಪಾಟೀಲ್ ಅವರ ಸಮೀಕ್ಷಾ ನುಡಿ. ಮುಖ್ಯ ಅತಿಥಿಗಳಾಗಿ ಧರ್ಮಗುರು ಹಜರತ್ ಖಾಜೀ ಷಂಶುದ್ದೀನ್ ಬರಕಾತಿ, ಫಾದರ್ ಜಾರ್ಜ್ ಕೆ.ಎಂ, ಬಿಜೆಪಿ ಮಾಜಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಎನ್.ಜಿ. ನಾಗನಗೌಡ್ರು ಸಿರಿಗೆರೆ, ಮಲೇಬೆನ್ನೂರು ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಚಿದಾನಂದಪ್ಪ, ಬಿ. ಎಂ. ವಾಗೀಶ್ ಸ್ವಾಮಿ, ನಿಕಿಲ್ ಕೊಂಡಜ್ಜಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಎಂ. ಬಸವಪ್ಪ, ಎಸ್.ಜಿ. ರಂಗನಾಥ, ಎಸ್.ಹೆಚ್ ಹೂಗಾರ್ , ಜಿ. ಎಂ. ಸದಾಶಿವಪ್ಪ ಇತರರು.

ಸಂಜೆ 6-30ಕ್ಕೆ ಸಾಂಸ್ಕೃತಿಕ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ : ಪ್ರಾಚಾರ್ಯರಾದ ಯಶಾ ದಿನೇಶ್, ದಾವಣಗೆರೆ. ಅಧ್ಯಕ್ಷತೆ : ಕಸಾಪ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ್. ಸಮಾರಂಭ ಯಶಸ್ವಿಯಾಗಲು ಮೆರವಣಿಗೆ, ಪ್ರಚಾರ, ಪುಸ್ತಕ ಮಳಿಗೆ, ಚಿತ್ರಕಲಾ, ವೇದಿಕೆ, ಆಹಾರ ಸಮಿತಿಯನ್ನು ರಚಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಹೇಳಿದರು.

# ಇನ್ಫೋಸಿಸ್ ಮೂರ್ತಿ ಮೊಮ್ಮಗ 240 ಕೋಟಿ ಒಡೆಯ

ನವದೆಹಲಿ, ಮಾ. 18 – ಇನ್ಫೋಸಿಸ್ ಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಅವರು ತಮ್ಮ ನಾಲ್ಕು ತಿಂಗಳ ಮೊಮ್ಮಗ ಏಕಾಗ್ರಹ ರೋಹನ್ ಮೂರ್ತಿಗೆ 240 ಕೋಟಿ ರೂ. ಮೌಲ್ಯದ ಷೇರುಗಳನ್ನು ನೀಡಿದ್ದಾರೆ. ಇದರಿಂದಾಗಿ ಏಕಾಗ್ರಹ ಭಾರತದ ಅತ್ಯಂತ ಕಿರಿಯ ಕೋಟ್ಯಾಧೀಶ ಆಗುವ ಸಾಧ್ಯತೆ ಇದೆ.

ಏಕಾಗ್ರಹ ಬಳಿ ಈಗ ಇನ್ಫೋಸಿಸ್‌ನ 15 ಲಕ್ಷ ಷೇರುಗಳಿವೆ. ಇದು ಒಟ್ಟು ಷೇರಿನ ಶೇ.0.04ರಷ್ಟಾಗಿದೆ. ಮೂರ್ತಿ ಬಳಿ ಇರುವ ಷೇರುಗಳ ಪ್ರಮಾಣ ಶೇ.0.40ರಿಂದ ಶೇ.0.36ಕ್ಕೆ ಇಳಿಕೆಯಾಗಿದೆ. ಈ ವಹಿವಾಟು ಮಾರುಕಟ್ಟೆಯೇತರವಾಗಿದೆ ಎಂದು ತಿಳಿಸಲಾಗಿದೆ. ಮೂರ್ತಿ ಅವರ ಪುತ್ರ ರೋಹನ್ ಮೂರ್ತಿ ಹಾಗೂ ಅಪರ್ಣ ಕೃಷ್ಣನ್ ದಂಪತಿಗೆ ಕಳೆದ ವರ್ಷ ನವೆಂಬರ್‌ನಲ್ಲಿ ಗಂಡು ಮಗುವಿನ ಜನನವಾಗಿತ್ತು. ಮಗುವಿಗೆ ಏಕಾಗ್ರಹ ಎಂಬ ಹೆಸರಿಡಲಾಗಿತ್ತು.

**ಕ್ರಯಪತ್ರ ಕಳೆದಿದೆ**
ದಿನಾಂಕ : 16.3.2024ರ ಸಂಜೆ 8.50 ರಲ್ಲಿ ಪಿ.ಜೆ. ಬಡಾವಣೆ ಬ್ಯಾಡಗಿ ಶೆಟ್ರು ಶಾಲೆ ಬಳಿ ಆಟೋ ಹತ್ತಿ, ನೂತನ ಕಾಲೇಜ್ ಹತ್ತಿರ, 4ನೇ ಮೇನ್‌ನಲ್ಲಿ ಇಳಿಯುವಾಗ ಕ್ರಯ ಪತ್ರದ ಮೂಲ ದಾಖಲಾತಿ ಇರುವ ಫೈಲ್ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ನಂಬರ್‌ಗೆ ತಿಳಿಸಿದಲ್ಲಿ ಸೂಕ್ತ ಬಹುಮಾನ ನೀಡಲಾಗುವುದು.
ಶಶಿಧರ ಎಂ.ಜಿ., 93809 84349
ಶಿವು , 96207 12615

**ಜಾತ್ರೆ ನೇರ ಪ್ರಸಾರ**
ದಾವಣಗೆರೆ ನಗರ ದೇವತೆ **ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ** ನೇರ ಪ್ರಸಾರವನ್ನು ವಿಕ್ಟರಿ **ಡಿಜಿಟಲ್ ಚಾನಲ್‌ನಲ್ಲಿ 150ನೇ ನಂಬರ್**ನಲ್ಲಿ ವೀಕ್ಷಿಸಬಹುದಾಗಿದೆ.

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿ ಇಡ್ಲಿ ಕೌಂಟರ್ ನಡೆಸಲು ನುರಿತ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸದ ಸಮಯ ಸಂಜೆ - 4:00 - 10:00 ಸಂಪರ್ಕಿಸಿ -
95388 96927

**ಕಟ್ಟಡ ಬಾಡಿಗೆಗಿದೆ**
ಯಾವುದೇ ಆಫೀಸ್‌ಗೆ ಯೋಗ್ಯವಾದ 2000 ಅಡಿ ವಿಸ್ತೀರ್ಣದ ಮೊದಲನೇ ಮಹಡಿ ಕಟ್ಟಡ ಎ.ಪಿ.ಎಂ.ಸಿ. ತರಕಾರಿ ಮಾರುಕಟ್ಟೆ ಹಿಂಭಾಗ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
98443 10140

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ನಾಟಿ ಕೋಳಿ ಹಾಗೂ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**Ladies Receptionist ಬೇಕಾಗಿದ್ದಾರೆ**
Boutique ಅಲ್ಲಿ ಕೆಲಸ ಮಾಡಲು, ಕನ್ನಡ ಮತ್ತು ಹಿಂದಿ ಮಾತನಾಡಲು ಬರತಕ್ಕದ್ದು. ವಿದ್ಯಾರ್ಹತೆ - PUC / Degree. Contact :
88924 51765, 94804 22747

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಮನೆ ಬಾಡಿಗೆಗೆ/ಲೀಸ್‌ಗಿದೆ**
# 187 JH ಪಟೇಲ್ ನಗರದಲ್ಲಿ 2 BHK ನೆಲ ಮಹಡಿ, ಪೋದಾರ್ ಮತ್ತು ಯುರೋಕಿಡ್ಸ್ ಶಾಲೆಯ ಹತ್ತಿರ, ಸೋಲಾರ್ ಮುನ್ಸಿಪಲ್ & ಬೋರ್‌ವೆಲ್ ಸೌಕರ್ಯವಿದೆ.
82967 46293, 99452 15240

**ಪರಿಚಯ್**
ಆರೋಗ್ಯ ಮತ್ತು ಆರ್ಥಿಕ ಅರಿವಿನ ಕಾರ್ಯಕ್ರಮ, ಉಚಿತ ಆರೋಗ್ಯ ಪರೀಕ್ಷಣೆ ಮತ್ತು ಸಮಾಲೋಚನೆ.
ಸಂಪರ್ಕಿಸಿ : 99022 03743
90603 20111, 88923 21088

**ಜಮೀನು ಮಾರಾಟಕ್ಕಿದೆ**
ಹರಿಹರ ನಗರದಿಂದ 2 ಕಿ.ಮೀ. ಹತ್ತಿರವಿರುವ ವಸತಿ ಶಾಲಾ-ಕಾಲೇಜ್ ಇಂಡಸ್ಟ್ರೀಸ್‌ಗೆ ಲಭ್ಯವಿರುವ 5 ಎಕರೆ 11 ಗುಂಟೆ ಮತ್ತು 6 ಎಕರೆ ಜಮೀನು ಮಾರಾಟಕ್ಕಿದೆ.
97427 70348, 99729 47548

**ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳಾ ಹಾಸ್ಟೆಲ್ ನಲ್ಲಿ ಮಹಿಳಾ ಮೇಲ್ವಿಚಾರಕರು (warden) ಕೆಲಸಕ್ಕೆ ಬೇಕಾಗಿದ್ದಾರೆ
63609 76841

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸರ್ವೀಸ್‌ಗಾಗಿ ಹಾಗೂ ಇತರೆ ಕೆಲಸಕ್ಕಾಗಿ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ :
99011 60717

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Change of Name**
I (Rishika V. Katkar (old Name) w/o Siddivinayaka B. Ghatge Resident of # 3886 Siddi Sumukh, 13th main, 6th cross, Near ayyappa swamy Temple, MCC B block, VTC : Davangere-577 004. have changed my name Rishika V. Katkar (old name) to Rishika S. Ghatge (New Name) Vide affidavit dated 18.03.2024 sworn before notary H.M. Doddagowdar, Davangere. Hence forth all my transactions and dealings will be in my new name.
Rishika S. Ghatge

**ಸೈಟುಗಳು ಮಾರಾಟಕ್ಕಿವೆ**
ಹರಿಹರ KHB ಕಾಲೋನಿ ಪಕ್ಕದ HRM ಬಡಾವಣೆಯಲ್ಲಿ 30x40 ಅಳತೆಯ ಪೂರ್ವ-ಪಶ್ಚಿಮ ದಿಕ್ಕಿನ ಅಳತೆಯ 4 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**WANTED**
Any Degree with Computer knowledge is must. for Male & Female.
*Contact : Exellent Electronics*
#2137/1, 4th Main, 3rd Cross, MCC 'A' Block, Davanagere - 577004
98865 15100

**ಬೇಕಾಗಿದ್ದಾರೆ**
SV Marketing, Davanagere, P.B. Road. * ಆಟೋ ಡ್ರೈವರ್ , * ಸೇಲ್ಸ್ ಎಕ್ಸಿಕ್ಯೂಟಿವ್, * ಅಂಗಡಿಯಲ್ಲಿ ಕೆಲಸ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
63020 23451, 97434 37003

**FIRST FLOOR SHOP FOR RENT**
For Office, Mini Bank Ready Made Garment Shop, Beauty Parlour Etc., (with Wash Room Fecility) N.R. Road, Davangere.
94483 69523

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TUITIONS**
IGCSE, ICSE, CBSE and State Board from class 5th to 12th MCC A Block
98444 92888

## ಪ್ರತ್ಯೇಕ ರಾಷ್ಟ್ರದ ಮಾತು

**(1ನೇ ಪುಟದಿಂದ)** ಪ್ರಯಾಣ ಸಮಯದಲ್ಲಿ ಎರಡು ಗಂಟೆ ಉಳಿತಾಯವಾಗಲಿದೆ. ಮುಂದಿನ ಐದು ವರ್ಷ ಎನ್‌ಡಿಎ ಸರ್ಕಾರ ಜನರ ಮನೆ ಬಾಗಿಲಿಗೆ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಕಾರ್ಯಗಳನ್ನು ತಲುಪಿಸಲಿದೆ ಎಂದವರು ಹೇಳಿದರು.

ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಜಯ ಗಳಿಸುವ ಮೂಲಕ 'ಈ ಬಾರಿ 400 ಮೀರಿ' ಸಾಗಬೇಕು ಎಂದರು. ಭಾರತದ ಪ್ರಗತಿಯನ್ನು ಇಡೀ ವಿಶ್ವ ನೋಡುತ್ತಿದೆ, ತಂತ್ರಜ್ಞಾನ, ಕೃಷಿ, ಬಾಹ್ಯಾಕಾಶ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ವಿಕಾಸ ಹೊಂದುತ್ತಿರುವ ದೇಶವಾಗಿ ಗುರುತಿಸಲ್ಪಡುತ್ತಿದೆ ಎಂದು ಮೋದಿ ಹೇಳಿದರು. ಕಳೆದ 10 ವರ್ಷಗಳ ಎನ್‌ಡಿಎ ಆಡಳಿತದಲ್ಲಿ 25 ಕೋಟಿ ಜನತೆಯನ್ನು ಬಡತನ ರೇಖೆಯಿಂದ ಮೇಲೆತ್ತಲಾಗಿದೆ ಎಂದೂ ಅವರು ತಿಳಿಸಿದರು. ನಾರಿಶಕ್ತಿಯನ್ನು ದಮನ ಮಾಡುವ ಪ್ರಯತ್ನದಲ್ಲಿ ನಿರತರಾಗಿರುವ ವಿರೋಧ ಪಕ್ಷಗಳು, ಜಾತಿ, ಸಮುದಾಯ, ಭಾಷೆ, ದೇಶ ಮತ್ತು ಕರ್ನಾಟಕದ ವಿಭಜನೆಯ ಮಾತನಾಡುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ದೇಶದ ನಾರಿಶಕ್ತಿ ಹಾಗೂ ಹಿಂದುತ್ವ ನಾಶ ಮಾಡಲು ಹೊರಟಿರುವವರಿಗೆ ಜೂನ್ 4ರ ಫಲಿತಾಂಶ ಬುದ್ಧಿ ಕಲಿಸುವಂತಿರಬೇಕು, ನಾರಿಶಕ್ತಿ ಏನೆಂಬುದನ್ನು ತೋರಿಸಬೇಕು ಎಂದು ಕರೆ ನೀಡಿದರು. ಇಂತಹ ವಿಭಜನಕಾರಿ ಶಕ್ತಿಗಳ ನಾಶಕ್ಕೆ ಪಣತೊಟ್ಟು ರಾಜ್ಯದ ಜನತೆ ಏಪ್ರಿಲ್ 26 ಮತ್ತು ಮೇ 7ರಂದು ಮನೆಯಿಂದ ಹೊರಬಂದು ಮತದಾನ ಮಾಡಬೇಕು ಎಂದು ಪ್ರಧಾನಮಂತ್ರಿ ಕರೆ ನೀಡಿದ್ದಾರೆ.

## ಹರಿಹರ: ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಅದ್ಧೂರಿ ಮೆರವಣಿಗೆ





ಹರಿಹರ, ಮಾ.18- ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ನಡೆದ 13 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ತಹಶೀಲ್ದಾರ್ ಗುರುಬಸವರಾಜ್ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಡೊಳ್ಳು, ಹಗಲು ವೇಷ, ಗೊಂಬೆ, ಕಹಳೆ ವಾದನ, ಸಮಾಳ, ಧರ್ಮಸ್ಥಳ ಸಂಘದ ಮಹಿಳೆಯರೂ ತಂಡ ಹಾಗೂ ಅಂಗನವಾಡಿ ಶಿಕ್ಷಕಿಯರು ಸೇರಿದಂತೆ ಇತರೆ ಕಲಾ ಮೇಳಗಳು ಭಾಗವಹಿಸಿ ಮೆರವಣಿಗೆಗೆ ಮೆರಗು ನೀಡಿದವು. ಸಾರೋಟದಲ್ಲಿ ಸಮ್ಮೇಳನಾಧ್ಯಕ್ಷರಾದ ಸಿ.ವಿ. ಪಾಟೀಲ್ ಮತ್ತು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಉಪಸ್ಥಿತರಿದ್ದರು. ಮೆರವಣಿಗೆಯಲ್ಲಿ ನಿಕಟ ಪೂರ್ವ ಸಮ್ಮೇಳನ ಅಧ್ಯಕ್ಷ ಯುಗ ಧರ್ಮ ರಾಮಣ್ಣ ಭಾಗವಹಿಸಿದ್ದರು.

ದಾವಣಗೆರೆ ಕಸಾಪ ಅಧ್ಯಕ್ಷೆ ಸುಮತಿ ಜಯ್ಯಪ್ಪ, ರುದ್ರಾಕ್ಷಿಬಾಯಿ ಮತ್ತು ಕಸಾಪ ಪದಾಧಿಕಾರಿಗಳು ಕಲಾ ಮೇಳಗಳ ತಾಳಕ್ಕೆ ತಕ್ಕಂತೆ ಕುಣಿಯುವ ಮೂಲಕ ಮೆರವಣಿಗೆಗೆ ರಂಗು ತಂದರು.

ಮೆರವಣಿಗೆ ನಗರದ ಶ್ರೀ ಹರಿಹರೇಶ್ವರ ದೇವಸ್ಥಾನ ಮುಂಭಾಗದಿಂದ ಆರಂಭಗೊಂಡು ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಗಾಂಧಿ ವೃತ್ತ, ಮುಖ್ಯರಸ್ತೆ, ಶಿವಮೊಗ್ಗ ರಸ್ತೆಯ ಮೂಲಕ ಸಂಚರಿಸಿ ಸಿದ್ದೇಶ್ವರ್ ಪ್ಯಾಲೇಸ್ ಆವರಣಕ್ಕೆ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ರಾಘವೇಂದ್ರ ನಾಯರಿ, ಗೌರವ ಕಾರ್ಯದರ್ಶಿಗಳಾದ ದಿಳ್ಳೆಪ್ಪ, ರೇವಣಸಿದ್ದಪ್ಪ, ಸಂಘಟನಾ ಕಾರ್ಯದರ್ಶಿಗಳಾದ ಸಿ.ಜಿ. ಜಗದೀಶ್ ಕೂಲಂಬಿ, ಜಿಗಳಿ ಪ್ರಕಾಶ್, ಸಹ ಕಾರ್ಯದರ್ಶಿ ವೀರೇಶ್ ಪ್ರಸಾದ್, ತಾಲ್ಲೂಕು ಅಧ್ಯಕ್ಷರಾದ ಮಂಜುನಾಥಯ್ಯ, ಸುಮತಿ ಜಯ್ಯಪ್ಪ ದಾವಣಗೆರೆ, ಚನ್ನಗಿರಿ ಮಧುಕುಮಾರ್, ಸದಸ್ಯೆ ರುದ್ರಾಕ್ಷಿ ಬಾಯಿ, ಎ ರಿಯಾಜ್ ಅಹ್ಮದ್, ತಾಲ್ಲೂಕು ಕಸಾಪ ಗೌರವ ಕಾರ್ಯದರ್ಶಿಗಳಾದ ಎಂ.ಚಿದಾನಂದ ಕಂಚಿಕೇರಿ, ಬಿ.ಬಿ. ರೇವಣ್ಣನಾಯ್ಕ್ ಖಜಾಂಚಿ ವಿಜಯ ಮಹಾಂತೇಶ್, ಎಸ್.ಹೆಚ್. ಹೂಗಾರ್, ಗೀತಾ ಕೊಂಡಜ್ಜಿ, ವಿ. ಬಿ. ಕೊಟ್ರೇಶ್, ಈಶಪ್ಪ ಬೂದಿಹಾಳ, ಗಣಪತಿ ಮಾಳಂಜಿ, ಹೆಚ್.ಕೆ. ಕೊಟ್ರಪ್ಪ, ಹೆಚ್. ನಿಜಗುಣ, ಸುರೇಶ್ ಕುಣೆಬೆಳಕೆರೆ, ಶೇಖರಗೌಡ ಪಾಟೀಲ್, ಹೆಚ್.ಸಿ. ಕೀರ್ತಿ ಕುಮಾರ್, ಜಿ ಮುಬಾರಕ್ ಅಲಿ, ಹೆಚ್. ಸುಧಾಕರ್, ಎಂ.ಉಮ್ಮಣ್ಣ, ಎ.ಕೆ. ಭೂಮೇಶ್, ಶಶಿನಾಯ್ಕ್, ಪ್ರೀತಂ ಬಾಬು, ಇಲಿಯಾಸ್ ಆಹ್ಮದ್, ಭಾಗ್ಯದೇವಿ, ಸುಮಂಗಳ, ಸಿದ್ದಮ್ಮ, ಸುಜಾತ, ವಿಜಯಕುಮಾರಿ, ವೀರೇಶ್ ಅಜ್ಜಣ್ಣನವರ್, ಅಂಬುಜಾ ಪಿ. ರಾಜೊಳ್ಳಿ, ಕವಿತಾ ಪೇಟೆಮಠ್, ಕವಿತಾ, ಕರಿಬಸಪ್ಪ ಕಂಚಿಕೇರಿ, ರಮೇಶ್ ಮಾನೆ, ಸೀತಾ ನಾರಾಯಣ, ಪರಮೇಶ್ವರಪ್ಪ ಕತ್ತಿಗೆ, ಜಿ.ಎಸ್. ನಾಗರಾಜ್, ಎನ್.ಇ. ಸುರೇಶ್, ಕೆ.ಬಿ. ರಾಜಶೇಖರ್, ಗುರುಬಸವರಾಜ್, ಅತೀಶ್, ಜಿ.ಎಸ್. ಜಗದೀಶ್ ಬೆಳ್ಳೂಡಿ ಇತರರು ಹಾಜರಿದ್ದರು.

## ಗ್ರಾಮದೇವತೆ ಹಬ್ಬಕ್ಕೆ ಮಲೇಬೆನ್ನೂರು ಸಜ್ಜು





### ಇಂದು ರಾತ್ರಿ ವೈಭವದ ಮೆರವಣಿಗೆ

ಮಲೇಬೆನ್ನೂರು, ಮಾ.18- ಪಟ್ಟಣದಲ್ಲಿ 5 ವರ್ಷಗಳ ಬಳಿಕ ಮತ್ತೆ ಗ್ರಾಮದೇವತೆಗಳಾದ ಏಕನಾಥೇಶ್ವರಿ, ಕೋಡಿ ಮಾರೇಶ್ವರಿ ಮತ್ತು ಹಟ್ಟಿ ದುರ್ಗಾಂಬಿಕಾದೇವಿ ಜಾತ್ರೆ ಮಂಗಳವಾರ ಮತ್ತು ಬುಧವಾರ ವೈಭವದೊಂದಿಗೆ ಜರುಗಲಿದೆ. ಅದಕ್ಕಾಗಿ ಮಲೇಬೆನ್ನೂರು ಪಟ್ಟಣ ಸಕಲ ರೀತಿಯಲ್ಲೂ ಸಜ್ಜಾಗಿದ್ದು, ಬೀಗರು-ಬಿಜ್ಜರನ್ನು ಆಹ್ವಾನಿಸುತ್ತಿದೆ.

ಗುರುವಾರ ಜರುಗಿದ ಶ್ರೀ ಬಸವೇಶ್ವರ ರಥೋತ್ಸವದ ವೇಳೆ ಪಟ್ಟಣದ ಮುಖ್ಯ ರಸ್ತೆ ಫ್ಲೆಕ್ಸ್‌ಗಳಿಂದ ತುಂಬಿ ತುಳುಕುತ್ತಿತ್ತು. ಆದರೀಗ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಭಾನುವಾರ ಹಬ್ಬಕ್ಕಾಗಿ ಹಾಕಿದ್ದ ಎಲ್ಲಾ ಫ್ಲೆಕ್ಸ್‌ಗಳನ್ನು ಅಧಿಕಾರಿಗಳು ತೆರವುಗೊಳಿಸಿದ್ದರಿಂದ ಫ್ಲೆಕ್ಸ್‌ಗಳ ಭರಾಟೆ ಇಲ್ಲದಂತಾಗಿದೆ.

**ವಿದ್ಯುತ್ ಅಲಂಕಾರ :** ಊರ ಹೊರಗಿರುವ ಏಕನಾಥೇಶ್ವರಿ ದೇವಸ್ಥಾನದ ಬಳಿ ನಿರ್ಮಿಸಿರುವ ಮಂಟಪ ಸೇರಿದಂತೆ ಪಟ್ಟಣದ ಎಲ್ಲಾ ಪ್ರಮುಖ ರಸ್ತೆಗಳು ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಅಮ್ಮನ ಹಬ್ಬಕ್ಕಾಗಿ ಮನೆಗಳನ್ನು ಸುಣ್ಣ-ಬಣ್ಣ ಮಾಡಿಸಲಾಗಿದ್ದು, ಮನೆ ಮಂದಿಗೆ ಹೊಸ ಬಟ್ಟೆ ಖರೀದಿಯೂ ಆಗಿದೆ.

ಮಾಂಸಹಾರಿ ಜನರ ಮನೆಗಳಲ್ಲಿ ಕನಿಷ್ಠ 2 ರಿಂದ ಗರಿಷ್ಠ 8-10 ಕುರಿಗಳನ್ನು ಹಬ್ಬಕ್ಕಾಗಿ ಕಟ್ಟಿದ್ದಾರೆ. ಬುಧವಾರ ಮತ್ತು ಗುರುವಾರ ಪಟ್ಟಣ ಹಬ್ಬದ ಊಟಕ್ಕಾಗಿ ಬರುವ ಬಂಧು-ಮಿತ್ರರಿಂದ ತುಂಬಿ ತುಳುಕಲಿದೆ.

ಹಬ್ಬವನ್ನು ಶಾಂತಿ-ಸಾಮರಸ್ಯ ಹಾಗೂ ಯಶಸ್ವಿಗೊಳಿಸುವ ಉದ್ದೇಶದಿಂದ ಹಬ್ಬದ ಸಮಿತಿ ರಚಿಸಿಕೊಂಡು ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದಾರೆ.

**ಅಮ್ಮನವರ ಉತ್ಸವ :** ಮಾ.19ರ ಮಂಗಳವಾರ ಬೆಳಿಗ್ಗೆ ಪರಶುರಾಮನ ಉಚ್ಚಾಯದ ನಂತರ ದೇವಸ್ಥಾನದಲ್ಲಿ ಜೋಗಮ್ಮನವರಿಗೆ ಪಡಲಿಗೆ ಮತ್ತು ಗೊರವಪ್ಪನವರಿಗೆ ದೋಣಿ ತುಂಬಿಸುವ ಶಾಸ್ತ್ರ ಮಾಡಲಾಗುವುದು.

ಮಧ್ಯಾಹ್ನ 12 ರಿಂದ ದೇವಸ್ಥಾನದಲ್ಲಿ ಭಕ್ತರಿಗೆ ಹೋಳಿಗೆ ಪ್ರಸಾದದ ಜೊತೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಅರ್ಚಕ ಪ್ರಕಾಶಾಚಾರ್ ತಿಳಿಸಿದ್ದಾರೆ.

ರಾತ್ರಿ 9 ರಿಂದ ಊರ ಒಳಗಿರುವ ಅಮ್ಮನವರ ದೇವಸ್ಥಾನದಿಂದ ಮೆರವಣಿಗೆ ಸಕಲ ವೈಭವದೊಂದಿಗೆ ಆರಂಭವಾಗಿ ಬುಧವಾರ ಬೆಳಗಿನ ಜಾವ ಹೊರ ಹೊರಗಿನ ದೇವಸ್ಥಾನ ತಲುಪಲಿದೆ.

ಹಟ್ಟಿ ದುರ್ಗಾಂಬಿಕೆ ದೇವಸ್ಥಾನದಿಂದ ಘಟೆ ಬಂದ ನಂತರ ಹಿಟ್ಟಿನ ಕೋಣನ ಬಲಿ ನೀಡಲಾಗುವುದು. ಮಂಗಳವಾರ ಮತ್ತು ಬುಧವಾರ ಅಮ್ಮನವರಿಗೆ ಉಡಿ ತುಂಬುವ ಮತ್ತು ಹರಕೆ ಸೇವೆಗಳು ನಡೆಯಲಿವೆ.

## ನಾಡು-ನುಡಿ, ಸಂಸ್ಕೃತಿಗೆ ಪ್ರೋತ್ಸಾಹ ಅಗತ್ಯ

**(1ನೇ ಪುಟದಿಂದ)** ನಿಟ್ಟಿನಲ್ಲಿ ಕನ್ನಡ ಅಪ್ಪಿಕೊಳ್ಳುವಂತೆ ಆಗಬೇಕು.



ಪ್ರತಿ ಮನೆಗಳಲ್ಲೂ ಪುಸ್ತಕದ ಕೋಣೆಗಳು ನಿರ್ಮಾಣಗೊಳ್ಳಬೇಕು. ಪ್ರಕಾಶಕರೂ ಉಳಿಯಬೇಕಾದರೆ ಪ್ರತಿಯೊಬ್ಬರೂ ತಮ್ಮ ಆದಾಯದಲ್ಲಿ ಶೇ. 5 ರಷ್ಟು ಹಣವನ್ನು ಪುಸ್ತಕ ಖರೀದಿಗಾಗಿ ವಿನಿಯೋಗಿಸಬೇಕೆಂದರು.

ಕನ್ನಡದ ಆತಂಕದ ಸ್ಥಿತಿ ಹೋಗಲಾಡಿಸಲು ನಾಡಿನಾದ್ಯಂತ ಇಂತಹ ಸಮ್ಮೇಳನಗಳ ಅಗತ್ಯವಿದೆ. ಮಹಲಿಂಗ ರಂಗ ರಂತಹ ಅನೇಕ ಸಾಧಕರು ಕಂಡಂತಹ ಜಿಲ್ಲೆ ದಾವಣಗೆರೆ. ಕನ್ನಡದ ಅಭಿಮಾನ ಮೂಡಿಸುವ ಕಾರ್ಯಗಳು ಹೆಚ್ಚು ಆಗಬೇಕು. ಸಂತೋಷಕ್ಕಾಗಿ ಸಾಹಿತ್ಯ ಅಲ್ಲಾ, ಸಂಸ್ಕಾರಕ್ಕಾಗಿ ಸಾಹಿತ್ಯ ಆಗಬೇಕು. ಸಾಹಿತ್ಯ, ಸಂಗೀತ, ಕಲೆಗಳಿಂದ ಹೃದಯ ಸಂಸ್ಕಾರ ಆಗುತ್ತದೆ. ದೇಶಗಳಲ್ಲಿ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಬಂದಿರುವುದು ಶ್ಲಾಘನೀಯ ಎಂದು ಹೇಳಿದರು.

ಸಮ್ಮೇಳನಧ್ಯಕ್ಷ ಪ್ರೊ. ಸಿ.ವಿ. ಪಾಟೀಲ್ ಮಾತನಾಡಿ, ಸ್ವಾಭಿಮಾನ ಮತ್ತು ಸಮನ್ವಯದ ಮೂಲಕ ಕನ್ನಡದ ಪ್ರಜ್ಞೆ ಮೂಡಿಸಬೇಕಿದೆ. ಸಮಕಾಲೀನ ಸಂದರ್ಭದಲ್ಲಿ ಕನ್ನಡಿಗರು ಎದುರಿಸುತ್ತಿರುವ ಶೈಕ್ಷಣಿಕ ಬಿಕಟ್ಟುಗಳು ಮತ್ತು ಮತ್ತು ಅಂತರಾಯ ನೆಲೆಗಳಿಂದಲೂ ಒದಗಿ ಬಂದ ಸಮಸ್ಯೆಗಳು, ಸಂವಿಧಾನ ಒಳಗೊಂಡಿರುವ ಪ್ರಜಾಪ್ರಭುತ್ವವಾದಿ ಕೆಲ ಆತಂಕಗಳು ಅಡ್ಡಿಯಾಗಿವೆ. ಇಂತಹ ಸಮಸ್ಯೆಗಳು ಹೊಸದೇನೂ ಅಲ್ಲ. ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿರುವುದರಿಂದ ಸತ್ವ, ಸಾಮರ್ಥ್ಯವನ್ನು ಕನ್ನಡ ಭಾಷೆ ಉಳಿಸಿಕೊಂಡು ಬಂದಿದೆ.

ತಾಲ್ಲೂಕಿನಲ್ಲಿ ನೀರು ಶೇಖರಣಾ ಕೇಂದ್ರ, ಸಾಂಸ್ಕೃತಿಕ ಭವನ, ಸೇರಿದಂತೆ ಹಲವಾರು ಬಗೆಯ ಸಮಸ್ಯೆಗಳು ಇದ್ದು, ಆದಷ್ಟು ಬೇಗ ಸರ್ಕಾರ ಅವುಗಳನ್ನು ಈಡೇರಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಹೇಳಿದರು.

ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಿಕಟಪೂರ್ವ ಅಧ್ಯಕ್ಷ ಯುಗಧರ್ಮ ರಾಮಣ್ಣ ಕನ್ನಡ ಧ್ವಜವನ್ನು ಹಸ್ತಾಂತರ ಮಾಡಿ ಮಾತನಾಡಿದರು.

ಪ್ರೊ. ಭೀಕ್ಷಾವರ್ತಿಮಠ ಸ್ಮರಣ ಸಂಚಿಕೆ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ತಪೋವನ ಛೇರ್ಮನ್ ಡಾ. ಶಶಿಕುಮಾರ್, ದಿಳ್ಳೆಪ್ಪ ರೇವಣಸಿದ್ದಪ್ಪ, ರಾಘವೇಂದ್ರ ನಾಯರಿ, ಸಿ.ಜಿ. ಜಗದೀಶ್ ಕೂಲಂಬಿ, ಎಂ. ಚಿದಾನಂದ ಕಂಚಿಕೇರಿ, ಬಿ.ಬಿ. ರೇವಣ್ಣನಾಯ್ಕ್, ಎ. ರಿಯಾಜ್ ಆಹ್ಮದ್, ಗೀತಾ ಕೊಂಡಜ್ಜಿ, ಸದಾನಂದ ಕುಂಬಳೂರು, ರುದ್ರಾಕ್ಷಿಬಾಯಿ, ಸುಮತಿ ಜಯ್ಯಪ್ಪ ಸೇರಿದಂತೆ ಕನ್ನಡ ಪರ ಸಂಘಟನೆ ಮುಖಂಡರು ಇತರರು ಭಾಗವಹಿಸಿದ್ದರು.

## ಕುಮಾರ ಸ್ಪರ್ಧೆಗೆ ಮೋದಿ ಒತ್ತಡ

ಬೆಂಗಳೂರು, ಮಾ. 18 - ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಂದ ಮತ್ತೆ ತೀವ್ರ ಒತ್ತಡ ಬಂದಿದೆ.

ರಾಜ್ಯದ ಮಿತಿಯೊಳಗೇ ರಾಜಕೀಯ ಮಾಡಿಕೊಂಡು ಇರಬೇಡಿ, ಯಾವುದಕ್ಕೂ ಹೆದರದೆ ಮಂಡ್ಯ ಸೇರಿದಂತೆ ಯಾವ ಕ್ಷೇತ್ರ ಅನುಕೂಲವೋ ಅಲ್ಲಿಂದಲೇ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಎಂದು ಕುಮಾರಸ್ವಾಮಿ ಅವರ ಮೇಲೆ ಪ್ರಧಾನಿ ಅವರು ಒತ್ತಡ ತಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಎಂದು ಕುಮಾರಸ್ವಾಮಿ ಅವರ ಮೇಲೆ ಒತ್ತಡ ತರುತ್ತಿದ್ದಾರೆ.

ಇಬ್ಬರು ದಿಗ್ಗಜ ನಾಯಕರ ಸಲಹೆಯನ್ನು ನಯವಾಗಿ ತಳ್ಳಿ ಹಾಕಿರುವ ಕುಮಾರಸ್ವಾಮಿ, ಸದ್ಯದಲ್ಲೇ ತಾವು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದು, ಚುನಾವಣಾ ಹೋರಾಟ ನಡೆಸಲು ಸಾಧ್ಯವಾಗುವುದಿಲ್ಲ, ಚುನಾವಣೆಯಲ್ಲಿ ಸ್ಪರ್ಧಿಸದಿರಲು ತಮಗೆ ಬೇರೆ ಯಾವುದೇ ಉದ್ದೇಶ ಇಲ್ಲ ಎಂದಿದ್ದಾರೆ.

ಈ ಬೆಳವಣಿಗೆಯ ನಂತರ ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿದ ಪ್ರಧಾನಿ ಅವರು, ನೀವು ಲೇಸರ್ ಚಿಕಿತ್ಸೆಗೆ ಒಳಗಾಗುತ್ತಿದ್ದೀರಿ, ಯಾವುದೇ ತೊಂದರೆ ಆಗುವುದಿಲ್ಲ, ಮಾರ್ಚ್ 25ಕ್ಕೆ ಆಸ್ಪತ್ರೆಯಿಂದ ಮರಳಿದ ನಂತರ ಮಂಡ್ಯದಲ್ಲೇ ನಿರ್ಧಾರ ಪ್ರಕಟಿಸಿ ಎಂಬ ಸಲಹೆ ನೀಡಿದ್ದಾರೆ.

ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರು ಬಿಜೆಪಿಯಿಂದ ಸ್ಪರ್ಧಿಸಲು ಸಮ್ಮತಿಸಿರುವುದಕ್ಕೆ ಪ್ರಧಾನಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪ್ರಧಾನಿ ಅವರ ಮಾತನ್ನು ತಳ್ಳಿ ಹಾಕಲಾಗದ ಕುಮಾರಸ್ವಾಮಿ ಅವರು, ಶಸ್ತ್ರಚಿಕಿತ್ಸೆ ನಂತರ ಮಾರ್ಚ್ 25ರಂದು ಮಂಡ್ಯದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ಕರೆದು ನಿರ್ಧಾರ ಪ್ರಕಟಿಸುವ ನಿರ್ಧಾರ ಕೈಗೊಂಡಿದ್ದಾರೆ.

## ರಾಹುಲ್ 'ಶಕ್ತಿ' ಹೋರಾಟಕ್ಕೆ ನರೇಂದ್ರ ಮೋದಿ ತಿರುಗೇಟು

### ಧರ್ಮದ ಬಗ್ಗೆ ಮಾತನಾಡಿಲ್ಲ ಎಂದು ರಾಹುಲ್ ಸ್ಪಷ್ಟನೆ

ನವದೆಹಲಿ, ಮಾ. 18 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಶಕ್ತಿ ವಿರುದ್ಧ ಹೋರಾಡುತ್ತೇವೆ' ಎಂದು ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಹುಲ್ ಹೇಳಿಕೆಗೆ ತಿರುಗೇಟು ನೀಡಿದ್ದು, ಪ್ರತಿಯೊಬ್ಬ ತಾಯಿ ಹಾಗೂ ಮಗಳು ಶಕ್ತಿ ಸ್ವರೂಪಿಣಿ. ನಾನು ಅವರ ರಕ್ಷಣೆಗಾಗಿ ಜೀವ ಅರ್ಪಿಸುತ್ತೇನೆ ಎಂದಿದ್ದಾರೆ.

ಮುಂಬೈನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ನಾನು ಧಾರ್ಮಿಕ ಶಕ್ತಿಯ ಬಗ್ಗೆ ಮಾತನಾಡಿಲ್ಲ. ಭ್ರಷ್ಟಾಚಾರ, ಅನ್ಯಾಯ ಹಾಗೂ ಸುಳ್ಳಿನ ಶಕ್ತಿ ವಿರುದ್ಧ ಮಾತನಾಡಿದ್ದೇನೆ ಎಂದಿದ್ದಾರೆ.

ಸಮಾವೇಶದಲ್ಲಿ ಮಾತನಾಡಿದ ರಾಹುಲ್ ಗಾಂಧಿ, 'ಹಿಂದೂ ಧರ್ಮ್ ಮೇ ಶಕ್ತಿ ಶಬ್ದ್ ಹೋತಾ ಹೈ. ಹಮ್ ಶಕ್ತಿ ಸೇ ಲಡ್ ರಹೇ ಹೈ. ಏಕ್ ಶಕ್ತಿ ಸೆ ಲಡ್ ರಹೇ ಹೈ.' (ಹಿಂದೂ ಧರ್ಮದಲ್ಲಿ ಶಕ್ತಿ ಎಂಬ ಪದವಿದೆ. ನಾವು ಶಕ್ತಿ ವಿರುದ್ಧ ಹೋರಾಡುತ್ತಿದ್ದೇವೆ. ಒಂದು ಶಕ್ತಿ ವಿರುದ್ಧ ಹೋರಾಡುತ್ತಿದ್ದೇವೆ) ಎಂದಿದ್ದರು.

ಮುಂದುವರೆದು ಮಾತನಾಡಿದ ಅವರು, ರಾಜನ ಆತ್ಮ ಇ.ವಿ.ಎಂ.ನಲ್ಲಿದೆ. ಹಿಂದೂಸ್ತಾನದ ಪ್ರತಿಯೊಂದು ಸಂಸ್ಥೆಯಲ್ಲಿದೆ. ಇ.ಡಿ., ಸಿ.ಬಿ.ಐ. ಹಾಗೂ ಆದಾಯ ತೆರಿಗೆ ಇಲಾಖೆಯಲ್ಲಿದೆ ಎಂದಿದ್ದರು. ಪರೋಕ್ಷವಾಗಿ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದರು.

ವಿವಾದದ ನಂತರ ಸ್ಪಷ್ಟನೆ ನೀಡಿರುವ ರಾಹುಲ್ ಗಾಂಧಿ, ನನ್ನ ಮಾತುಗಳನ್ನು ತಿರುಚಲಾಗುತ್ತಿದೆ. ನಾನು ಸತ್ಯವನ್ನೇ ಹೇಳಿದ್ದೇನೆ ಎಂದಿದ್ದಾರೆ.

ಶಿವಮೊಗ್ಗದಲ್ಲಿ ಮಾತನಾಡಿದ ಮೋದಿ, ಪ್ರತಿಪಕ್ಷಗಳ ಮೈತ್ರಿಕೂಟ ಶಕ್ತಿ ನಾಶಗೊಳಿಸಲು ಬಯಸುವುದಾಗಿ ಹೇಳಿದೆ. ಹೀಗಿರುವಾಗ, ಶಕ್ತಿಯ ಆರಾಧನೆ ನಮ್ಮ ಬದ್ಧತೆಯಾಗಿದೆ ಎಂದರು.

ಇದಕ್ಕೂ ಮುಂಚೆ ತೆಲಂಗಾಣದ ಚಗ್ತಿಯಾಲ್‌ನಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ, ಕಳೆದ ವರ್ಷ ನಡೆದ ಚಂದ್ರಯಾನ – 3 ಯಶಸ್ಸನ್ನು 'ಶಿವ ಶಕ್ತಿ'ಗೆ ಅರ್ಪಿಸಲಾಗಿತ್ತು. ಆದರೆ, ಪ್ರತಿಪಕ್ಷಗಳು ಶಕ್ತಿಯನ್ನು ನಾಶಗೊಳಿಸುವುದಾಗಿ ಹೇಳುತ್ತಿವೆ ಎಂದಿದ್ದಾರೆ.

17ನೇ ಶತಮಾನದಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಅವರು ದೇವಿ ತುಳಜಾ ಭವಾನಿ ಆಶೀರ್ವಾದ ಪಡೆದಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದರು. ಅವರು ಶಕ್ತಿ ಆರಾಧಕರು. ಅದೇ ಶಿವಾಜಿ ಪಾರ್ಕ್‌ನಲ್ಲಿ, ಶಕ್ತಿಯನ್ನು ನಾಶಗೊಳಿಸುವುದಾಗಿ ಘೋಷಿಸಲಾಗುತ್ತಿದೆ ಎಂದು ಕಿಡಿ ಕಾರಿದರು.

ದೇಶದ ಕೋಟ್ಯಂತರ ಜನರು ಶಕ್ತಿ ಸ್ವರೂಪಿಣಿಯಾದ ದೇವಿಯನ್ನು ಆರಾಧಿಸುತ್ತಾರೆ. ಸಾರ್ವಜನಿಕ ಜೀವನಕ್ಕೆ ನಾನು ಕಾಲಿರಿಸಿದಾಗ ಚೈತನ್ಯ ನೀಡಿದ್ದೇ ಈ ಶಕ್ತಿ ಎಂದೂ ಮೋದಿ ಹೇಳಿದರು.

ಈ ನಡುವೆ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ಪವನ್ ಖೇರಾ, ಅಸುರಿ ಶಕ್ತಿಗಳ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿರುವುದಕ್ಕೆ ಪ್ರಧಾನ ಮಂತ್ರಿಗೆ ಬೇಸರವಾಗಿದೆ. ಈ ಚುನಾವಣೆಯು ಅಸುರಿ ಶಕ್ತಿ ಹಾಗೂ ದೈವಿಕ ಶಕ್ತಿಗಳ ನಡುವಿನ ಸಂಘರ್ಷವಾಗಿದೆ ಎಂದಿದ್ದಾರೆ.

## ಪ್ರಮಾಣ ವಚನ ಬೋಧಿಸಲು ನಕಾರ ಸುಪ್ರೀಂ ಕೋರ್ಟ್‌ನಿಂದ ವಿಚಾರಣೆ

ನವದೆಹಲಿ, ಮಾ. 18 - ಡಿ.ಎಂ.ಕೆ. ನಾಯಕ ಕೆ. ಪೊನ್ಮುಡಿ ಅವರಿಗೆ ರಾಜ್ಯ ಸಂಪುಟ ಸಚಿವರಾಗಿ ಪ್ರಮಾಣ ವಚನ ಬೋಧಿಸಲು ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ನಿರಾಕರಿಸಿರುವ ಕುರಿತು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊನ್ಮುಡಿ ಎರಡು ವರ್ಷಗಳ ಶಿಕ್ಷೆಗೆ ಗುರಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಅನರ್ಹಗೊಳಿಸಲಾಗಿತ್ತು. ಅವರ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

ಈ ಹಿನ್ನೆಲೆಯಲ್ಲಿ ಸಚಿವರಾಗಿ ಮರು ನೇಮಕ ಮಾಡಲು ತಮಿಳುನಾಡು ಸರ್ಕಾರ ಮುಂದಾಗಿತ್ತು. ಪ್ರಮಾಣ ವಚನ ಬೋಧಿಸಲು ನಿರಾಕರಿಸಿದ್ದ ರಾಜ್ಯಪಾಲ ರವಿ, ಇದು ಸಂವಿಧಾನದ ನೈತಿಕತೆಗೆ ವಿರುದ್ಧವಾಗಿದೆ ಎಂದಿದ್ದರು.

ರಾಜ್ಯಪಾಲರ ನಿಲುವಿನ ವಿರುದ್ಧ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಿಸಲಾದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದ ನಂತರ, ಅವರ ಶಾಸಕ ಸ್ಥಾನವನ್ನು ಮತ್ತೆ ನೆಲೆಗೊಳಿಸಲಾಗಿತ್ತು.

## 1,300 ಕೋಟಿ ರೂ. ವಿಳಂಬ ಶುಲ್ಕದ ಅದಾನಿ ಅರ್ಜಿ ವಜಾ

ನವದೆಹಲಿ, ಮಾ. 18 - ರಾಜಸ್ಥಾನದ ಸರ್ಕಾರಿ ಸ್ವಾಮ್ಯದ ವಿದ್ಯುತ್ ವಿತರಣಾ ಕಂಪನಿ 1,300 ಕೋಟಿ ರೂ.ಗಳ ವಿಳಂಬ ಶುಲ್ಕ ಪಾವತಿಸಬೇಕು ಎಂದು ಅದಾನಿ ಪವರ್ ರಾಜಸ್ಥಾನ ಕಂಪನಿ ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಅದಾನಿ ಪವರ್ ರಾಜಸ್ಥಾನಕ್ಕೆ ಸುಪ್ರೀಂ ಕೋರ್ಟ್ 50 ಸಾವಿರ ರೂ.ಗಳ ದಂಡವನ್ನೂ ವಿಧಿಸಿದೆ.

ವಿಳಂಬ ಶುಲ್ಕಕ್ಕೆ ಸಂಬಂಧಿಸಿದಂತೆ ಅದಾನಿ ಕಂಪನಿಯು ಸೂಕ್ತ ರೀತಿಯಲ್ಲಿ ಕಾನೂನು ಮಾರ್ಗ ಪಾಲಿಸಿಲ್ಲ ಎಂದು ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ಪಿ.ವಿ. ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

## ಹರಪನಹಳ್ಳಿಯಲ್ಲಿ ಲೋಕ ಅದಾಲತ್ ಮೂಲಕ 1311 ಪ್ರಕರಣ ಇತ್ಯರ್ಥ



ಹರಪನಹಳ್ಳಿ, ಮಾ.18- ರಾಷ್ಟ್ರೀಯ ಲೋಕ ಅದಾಲತ್ ಮೂಲಕ ರಾಜೀ ಸಂಧಾನದಡಿ ಹರಪನಹಳ್ಳಿಯ ಉಭಯ ನ್ಯಾಯಾಲಯಗಳಲ್ಲಿ ಶನಿವಾರದಂದು ನ್ಯಾಯಾಧೀಶರಾದ ಎಂ. ಭಾರತಿ ಮತ್ತು ಫಕ್ಕೀರವ್ವ ಕೆಳಗೇರಿ ಅವರ ನೇತೃತ್ವದಲ್ಲಿ 1604 ಪ್ರಕರಣಗಳ ಪೈಕಿ 1311 ಪ್ರಕರಣವನ್ನು ಇತ್ಯರ್ಥಗೊಳಿಸಿದ್ದಾರೆ.

ಪಟ್ಟಣದ ಉಭಯ ನ್ಯಾಯಾಲಯಗಳ ನಡೆದ ಲೋಕ ಅದಾಲತ್‌ನಲ್ಲಿ ರಸ್ತೆ ಅಪಘಾತ, ಚೆಕ್ ಬೌನ್ಸ್ , ಬ್ಯಾಂಕ್ ಸಾಲ ವಸೂಲಿ, ಜಮೀನು ವಿವಾದ, ಕೌಟುಂಬಿಕ ದೌರ್ಜನ್ಯ, ಕ್ರಿಮಿನಲ್ ಪ್ರಕರಣ, ಮೋಟಾರು ವಾಹನ, ಸಹಕಾರಿ ಬ್ಯಾಂಕುಗಳು , ನಿವೇಶನ ಮಾರಾಟ ಪ್ರಕರಣಗಳು ಇತ್ಯರ್ಥಗೊಂಡವು.

ಸಿವಿಲ್ ನ್ಯಾಯಾಲಯದ ನ್ಯಾಯಾಧೀಶೆ ಎಂ.ಭಾರತಿ ಅವರು ರಸ್ತೆ ಅಫಘಾತ ಸೇರಿದಂತೆ ಇತರೆ 700 ಪ್ರಕರಣಗಳ ಪೈಕಿ 593 ಪ್ರಕರಣಗಳನ್ನು ಇತ್ಯರ್ಥ ಪಡಿಸಿ 45,56,190 ರೂ. ಪರಿಹಾರ ಕೊಡಿಸಿದ್ದಾರೆ.

ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಅವರು 904 ಪ್ರಕರಣಗಳ ಪೈಕಿ 718 ಪ್ರಕರಣಗಳನ್ನು ಇತ್ಯರ್ಥ ಪಡಿಸಿ 40,84,072 ರೂ. ಪರಿಹಾರ ಕೊಡಿಸಿದ್ದಾರೆ. ಒಟ್ಟು 1311 ಪ್ರಕರಣಗಳಿಗೆ 87,40,262 ರೂ. ಪರಿಹಾರ ಒದಗಿಸಿದ್ದಾರೆ.

ಸುಮಾರು ವರ್ಷಗಳಿಂದ ದಾಂಪತ್ಯ ಜೀವನದಲ್ಲಿ ಬಿರುಕು ಕಂಡು ವಿಚ್ಛೇದನಕ್ಕಾಗಿ ಕೋರ್ಟಿಗೆ ಬರುತ್ತಿದ್ದ ಜೋಡಿಗಳ ಮನಸ್ಸು ಬದಲಾಯಿಸಿ ದಂಪತಿಗಳನ್ನು ಒಂದು ಮಾಡುವಲ್ಲಿ ನ್ಯಾಯಾಧೀಶರು ಯಶ್ವಸಿಯಾದರು.

ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್, ಉಪಾಧ್ಯಕ್ಷ ಸಿ. ಪಿರ್ ಅಹಮ್ಮದ್, ಕಾರ್ಯದರ್ಶಿ ಜಿ. ಎಸ್ ಎಂ. ಕೊಟ್ರಯ್ಯ, ಜಂಟಿ ಕಾರ್ಯದರ್ಶಿ ಎಚ್.ಎಂ. ಕೇಶವಮೂರ್ತಿ, ಖಜಾಂಚಿ ಹೂಲೆಪ್ಪ, ಅಪರ ಸರ್ಕಾರಿ ವಕೀಲ ನಂದೀಶ್, ಸರ್ಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ, ನಿರ್ಮಲ, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯರಾದ ಕೊಟ್ರೇಶ್, ಬಸವರಾಜ್ ಮತ್ತು ನ್ಯಾಯಾಲಯದ ಸಿಬ್ಬಂದಿ ಇದ್ದರು.

## ಕಸಾಯಿ ಖಾನೆಗಳು ಇ.ಐ.ಎ. ವ್ಯಾಪ್ತಿಗೆ ಬೇಡ : ಕೇಂದ್ರ

**(1ನೇ ಪುಟದಿಂದ)** ಪತ್ರ ಸಲ್ಲಿಸಿರುವ ಕೇಂದ್ರ ಪರಿಸರ ಸಚಿವಾಲಯ, ಈ ಘಟಕಗಳಿಗೆ ಸಂಬಂಧಿಸಿದಂತೆ ಪರಿಸರ ಸಂಬಂಧಿ ನಿಯಮಗಳು ಈಗಾಗಲೇ ಜಾರಿಯಲ್ಲಿವೆ ಎಂದು ಹೇಳಿದೆ. ಪ್ರಾಣಿ ಹಕ್ಕುಗಳ ಕಾರ್ಯಕರ್ತೆ ಗೌರಿ ಮೌಲೇಖಿ ಅವರು ಕಳೆದ ವರ್ಷ ಹಸಿರು ನ್ಯಾಯಾಧೀಕರಣದ ಎದುರು ಅರ್ಜಿ ದಾಖಲಿಸಿ, ಈ ಘಟಕಗಳನ್ನು ಇ.ಐ.ಎ. 2006ರ ವ್ಯಾಪ್ತಿಗೆ ತರಬೇಕು ಎಂದು ಮನವಿ ಸಲ್ಲಿಸಿದ್ದರು.

### ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ.

**ಪಿ.ಅಂಡ್‌ಎಸ್.ಎಸಿ.ನಂ. 2/2024**

ಅರ್ಜಿದಾರರು :- 1) ಪ್ರಮುಖ್ ಜಯರಾಮುಲು ಪದ್ಮಶಾಲಿ ಬಿನ್ ಲೇಟ್ ಜಯರಾಮುಲು.ಟಿ. ವಯಸ್ಸು ಸುಮಾರು 23 ವರ್ಷ

2) ಪ್ರಿಯಾಂಕ ಜಯರಾಮ್ ಬಿನ್ ಲೇಟ್ ಜಯರಾಮುಲು.ಟಿ. ವಯಸ್ಸು ಸುಮಾರು 31 ವರ್ಷ, ಇಬ್ಬರ ವಾಸ. 1772/50/1, 6ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ. - ವಿರುದ್ಧ - ಎದುರುದಾರರು :- ಯಾರೂ ಇಲ್ಲ,

**ವ್ಯವಹಾರ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20 (1-A) ರ ಪ್ರಕಾರ ಪತ್ರಿಕಾ ಪ್ರಕಟಣೆ**

ಈ ಮೇಲ್ಕಾಣಿಸಿದ ಅರ್ಜಿದಾರರುಗಳು ದಾವಣಗೆರೆ ವಾಸಿಗಳಾಗಿದ್ದು, ಅರ್ಜಿದಾರರುಗಳು ಜಯರಾಮುಲು ಟಿ ಮತ್ತು ಶೋಭಾ ರಾಣಿ ದಂಪತಿಗಳ ಕಾನೂನು ಬದ್ದ ವಾರಸುದಾರರಾಗಿದ್ದು, ಸದರಿ ಜಯರಾಮುಲು ಟಿ ರವರು ದಿನಾಂಕ: 03.08.2022 ರಂದು ಮರಣ ಹೊಂದಿದ್ದು ಸದರಿ ಕುಟುಂಬಕ್ಕೆ ಅರ್ಜಿದಾರರುಗಳೇ ವಾರಸುದಾರರೆಂದು ಘೋಷಿಸಲು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಸದರಿಯವರು ಚರ ಮತ್ತು ಸ್ಥಿರಾಸ್ತಿಗಳಿಗೆ ಅರ್ಜಿದಾರರುಗಳೇ ವಾರಸುದಾರರೆಂದು ಘೋಷಿಸಲು ದಾವಣಗೆರೆ ಸಿವಿಲ್ ನ್ಯಾಯಾಲಯ ಹಿರಿಯ ವಿಭಾಗದಲ್ಲಿ ದಾವೆ ದಾಖಲಿಸಿ, ವಾರಸುದಾರರೆಂದು ಘೋಷಿಸಿ ಉತ್ತರಾಧಿಕಾರ ಪತ್ರವನ್ನು ನೀಡಬೇಕೆಂದು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಅರ್ಜಿಗೆ ಸಂಬಂಧ ಪಟ್ಟಂತೆ ಯಾರದಾದರೂ ತಕರಾರು ಇದ್ದರೆ ದಿನಾಂಕ: 25.4.2024 ರಂದು ಬೆಳಿಗ್ಗೆ 11-00 ಗಂಟೆಗೆ ವೈಯಕ್ತಿಕವಾಗಿಯಾಗಲಿ ಅಥವಾ ವಕೀಲರ ಮೂಲಕವಾಗಲೀ ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ನಿಮ್ಮ ಅಹವಾಲು ಏನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು, ಇಲ್ಲವಾದರೆ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2024ರ ಮಾರ್ಚ್ ತಿಂಗಳಿನ 13ನೇ ದಿನದಂದು ಇದನ್ನು ನೀಡಲಾಗಿದೆ.

**ಅರ್ಜಿದಾರರ ಪರ ವಕೀಲರು**
**ಸಹಿ/- ಅಶೋಕ್ ಕುಮಾರ್**
**ನ್ಯಾಯವಾದಿಗಳು, ದಾವಣಗೆರೆ.**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ /- ಶಿರಸ್ತೇದಾರರು,**
**2ನೇ ಹೆಚ್ಚುವರಿ ಹಿರಿಯ ಸಿವಿಲ್**
**ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ,**




ನಗರದೇವತೆ
ಶ್ರೀ ದುರ್ಗಾಂಬಿಕಾ ದೇವಿಯ
ಜಾತ್ರಾ ಮಹೋತ್ಸವದ
ಹಾರ್ದಿಕ ಶುಭಾಷಯಗಳು
ಜಾತ್ರಾ ಪ್ರಯುಕ್ತ ದಿನಾಂಕ : 19 ಮತ್ತು 20 ಮಾರ್ಚ್ 2024 ರಂದು "ಯಮಹಾ ಶೋರೂಂ" ರಜೆ ಇರುತ್ತದೆ.
ಎಂದಿನಂತೆ 21-3-2024 ರಿಂದ ಶೋರೂಂ ಕಾರ್ಯ ನಿರ್ವಹಿಸುತ್ತದೆ. ಗ್ರಾಹಕರು ಸಹಕರಿಸಬೇಕಾಗಿ ವಿನಂತಿ
ಶುಭಕೋರುವವರು : ಮಾಲೀಕರು ಹಾಗೂ ಸಿಬ್ಬಂದಿ ವರ್ಗ
T S ENTERPRISES # 3371/27-56P2, "Rathna" Telegi Ujjappa Layout, Vinayaka Nagar, P.B. Road, DAVANGERE-06.
TELEGI SIDDESHI Branch : BLUE SQUARE, # 1260/9, Shivakumar Swamy Extn., 2nd Stage, Davangere-05.

## ಚಿರ ಚೈತನ್ಯವಾಹಿನಿಗೆ ಅಶ್ರುತರ್ಪಣ



ಸೇವೆಗಾಗಿ ಸದಾ ಹೊಸ ಹೊಸ ಆಯಾಮಗಳನ್ನು ಸೃಷ್ಟಿಸುತ್ತಾ, ವನಿತಾ ಸಮಾಜದ ಮೂಲಕ ಮಹಿಳೆಯರು ಮತ್ತು ಮಕ್ಕಳಿಗಾಗಿ ಅನೇಕ ಸಂಸ್ಥೆಗಳನ್ನು ಹುಟ್ಟುಹಾಕಿದ, ಹಲವಾರು ಆದರ್ಶಗಳ ಅದಮ್ಯ ಚೇತನ.... ಕರುಣೆ, ಮಮತೆ, ವಾತ್ಸಲ್ಯ, ಮಾನವೀಯತೆಯ ಪ್ರತೀಕದಂತಿದ್ದ, ಸರಳ ನಡೆ-ನುಡಿಯ, ಪ್ರಭಾವಶಾಲಿ ವ್ಯಕ್ತಿತ್ವದ ನಮ್ಮೆಲ್ಲರ ನೆಚ್ಚಿನ ಆಂಟಿ

### ಶ್ರೀಮತಿ ನಾಗಮ್ಮ ಕೇಶವಮೂರ್ತಿ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

### ವನಿತಾ ಸಮಾಜದ ಆಡಳಿತ ಮಂಡಳಿ

ದಾವಣಗೆರೆ ಶಿಶು ಕಲ್ಯಾಣ ಮಂಡಳಿ

ಪ್ರೇರಣ ವನಿತಾ ಉದ್ಯಮಿಗಳ ಸಂಘ

- ಭಾರತೀಯ ಗ್ರಾಮೀಣ ಮಹಿಳಾ ಸಂಘ
- ಅಖಿಲ ಮಹಿಳಾ ಸಮಾಜಗಳ ಒಕ್ಕೂಟ
- ಸಮತಾ
- ಶ್ರೀ ಸತ್ಯಸಾಯಿ ಅಧ್ಯಾತ್ಮ ಕೇಂದ್ರ
- ಪ್ರೇಮಾಲಯ
- ಸ್ನೇಹಾಲಯ
- ಆಶ್ರಯ ಹಿರಿಯ ವನಿತೆಯರ ಆನಂದ ಧಾಮ
- ವಾತ್ಸಲ್ಯ ಹಾಗೂ ಶಿಲ್ಪಾಲಯ ವಸತಿ ನಿಲಯ
- ವನಿತಾ ಸಾಹಿತ್ಯ ವೇದಿಕೆ
- ಯುವ ವನಿತಾ
- ಶೃತಿ ಸಂಗೀತ ನೃತ್ಯ ವೇದಿಕೆ
- ಪ್ರಜ್ಞಾ ಹಿರಿಯ ವನಿತೆಯರ ಸಂಘ
- ಭೂಮಿಕ ವನಿತಾ ರಂಗವೇದಿಕೆ
- ವನಿತಾ ಸಹಾಯ ಸಮಿತಿ
- ವನಿತಾ ವಾರ್ತೆ
- ಸಾಹಸ್ ಸಿ.ಕೆ. ವಾಕ್ ಶ್ರವಣ ಕೇಂದ್ರ
- ವಿಮೋಚನ ಸಿ.ಕೆ. ಸಮುದಾಯ ಆಧಾರಿತ ಅಂಗವಿಕಲರ ಪುನರ್ವಸತಿ ಕೇಂದ್ರ
- ವಿಹ ವನಿತಾ ಪರಿಸರ ವೇದಿಕೆ
- ವನಿತಾ ವೈದ್ಯೆಯರ ವೇದಿಕೆ
- ವನಿತಾ ಶಿಕ್ಷಕಿಯರ ವೇದಿಕೆ

# ಕಟ್ಟುಪಾಡಿನಲ್ಲಿ ಬದುಕದೇ, ಸ್ವತಂತ್ರವಾಗಿ ಬದುಕಿ



ದಾವಣಗೆರೆ, ಮಾ.18 - ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಬಾಪೂಜಿ ವಿದ್ಯಾ ಸಂಸ್ಥೆಯಿಂದ ಈಚೆಗೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಮಹಿಳೆಯರು ಕಟ್ಟುಪಾಡಿನಲ್ಲಿ ಬದುಕದೇ ಬೃಹತ್ ಆಲದ ಮರದಂತೆ ಸ್ವತಂತ್ರರಾಗಿ ಬದುಕಬೇಕು ಎಂದು ಸಮಾಜ ಸೇವಕಿ ನೀಲಿಮಾ ಮಿಶ್ರಾ ಹೇಳಿದರು.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ನಮ್ಮ ಸುತ್ತ ಮುತ್ತಲಲ್ಲೇ ಅನೇಕ ಆದರ್ಶ ಮಹಿಳೆಯರಿದ್ದಾರೆ ಎಂದರು.

ಬರುವ ದಿನಗಳಲ್ಲಿ ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಕ್ಯಾನ್ಸರ್ ತಪಾಸಣೆ ಹಾಗೂ ಆರೋಗ್ಯ ತಪಾಸಣೆ ಏರ್ಪಡಿಸುತ್ತೇವೆ ಎಂದು ತಿಳಿಸಿದರು. ವಿವಿಧ ಕಾಲೇಜಿನ ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಮನರಂಜಿಸಿದರು.

ಜೆ.ಎಸ್. ವನಿತಾ ಸ್ವಾಗತಿಸಿದರು. ಡಾ. ಶೃತಿ ಮಾಕನೂರ್ ವಂದಿಸಿದರು. ಡಾ. ಜ್ಞಾನಶ್ರೀ ಮತ್ತು ಡಾ. ಡೆಂಜಿ ಲಾರೆನ್ಸ್ ನಿರೂಪಿಸಿದರು.

ಕಿರುವಾಡಿ ಗಿರಿಜಮ್ಮ, ಸಿ.ಬಿ. ಶೈಲಾ ಜಯಕುಮಾರ್, ಡಾ. ವಿನುತಾ, ಡಾ. ಲತಾ ಶಾಮನೂರು, ಡಾ. ಶಾಂತಲಾ ಮತ್ತು ಸಂಸ್ಥೆಯ ಮಹಿಳಾ ಸಿಬ್ಬಂದಿ ಇದ್ದರು.




## ಶುಭದಾ ತಂಡದಿಂದ ವೀಣಾ ವಾದನ

ದಾವಣಗೆರೆ, ಮಾ. 18 - ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮೊನ್ನೆ ಏರ್ಪಾಡಾಗಿದ್ದ ಶ್ರೀ ರಾಘವೇಂದ್ರ ಸ್ವಾಮಿಗಳ ಸಪ್ತಾಹದ ಸಂದರ್ಭದಲ್ಲಿ ವಿದುಷಿ ಶುಭದಾ ಮತ್ತು ತಂಡದಿಂದ ವೀಣಾ ವಾದನ ನಡೆಯಿತು. ಕಲಾವಿದರಾದ ಸುಮನಾ, ನಿಹಾರಿಕಾ, ಸ್ಮಿತಾ, ಸ್ವರೂಪಾ, ಮಾಧುರಿ, ಕವಿತಾ, ಚಂದ್ರಿಕಾ, ಗೌರಿ, ಶಕುಂತಲಾ, ಸೌಮ್ಯ ಸಾಥ್ ನೀಡಿದರು.

### 10ನೇ ವರ್ಷದ ಪುಣ್ಯಸ್ಮರಣೆ



ಬ್ರಹ್ಮಲೀನ ಶ್ರೀಮತಿ ಗೌರಮ್ಮ ಬಸಪ್ಪ ಜೋಗಪ್ಪನವರ, ದಾವಣಗೆರೆ.

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇರ್ಜನ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ॥

ನಿಸ್ವಾರ್ಥ ಪ್ರಾಮಾಣಿಕ ಸೇವೆ ಹಾಗೂ ಕರ್ತವ್ಯ ಭಾವದ ಆಸಕ್ತಿಯಿಂದ ಸಾತ್ವಿಕ ತ್ಯಾಗದ ಫಲವನ್ನು ನಮ್ಮೆಲ್ಲರಿಗೂ ಕರುಣಿಸಿದ ಮಹಾನುಭಾವರು, ಮಾರ್ಗದರ್ಶಕರೂ ಆದ ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಸಂದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರು. ನಿಮ್ಮ ನಡೆ, ನುಡಿಗಳು ನಮಗೆ ಸದಾ ದಾರಿದೀಪ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮ ಚಿರಶಾಂತಿ ನೀಡಲಿ ಎಂದು ಶ್ರೀ ಭಗವಂತನಲ್ಲಿ ಪ್ರಾರ್ಥಿಸಿ ಶ್ರದ್ಧಾಂಜಲಿ ಸಲ್ಲಿಸುವ

ಜೋಗಪ್ಪನವರ ಬಸಪ್ಪನವರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಜೋಗಪ್ಪನವರ ಕುಟುಂಬಸ್ಥರು ಹಾಗೂ ಬಂಧು-ಮಿತ್ರರು. ಪಿ.ಜೆ. ಬಡಾವಣೆ, ದಾವಣಗೆರೆ.

## ನಗರದಲ್ಲಿ ಇಂದು - ನಾಳೆ ಕೃಷಿ ಮಾರುಕಟ್ಟೆ ಬಂದ್

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರೆಯ ಅಂಗವಾಗಿ ಇಂದು ಮತ್ತು ನಾಳೆ ಕೃಷಿ ಉತ್ಪನ್ನಗಳ ವ್ಯಾಪಾರ-ವಹಿವಾಟು ಸ್ಥಗಿತಗೊಳಿಸಲಾಗಿದೆ. ವರ್ತಕರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವುದರಿಂದ ರೈತರು ಕೃಷಿ ಉತ್ಪನ್ನವನ್ನು ಮಾರುಕಟ್ಟೆಗೆ ತರಬಾರದೆಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ಸಹಸ್ರ ಕಳಶ ಕ್ಷೀರಾಭಿಷೇಕ



ದಾವಣ ಗೆರೆ, ಮಾ. 18 - ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮೊನ್ನೆ ನಡೆದ ಶ್ರೀ ರಾಘವೇಂದ್ರ ಸ್ವಾಮಿಗಳವರ ಸಪ್ತಾಹದಲ್ಲಿ ರಾಯರ ವರ್ಧಂತಿ ಅಂಗವಾಗಿ ಮೃತ್ತಿಕಾ ವೃಂದಾವನಕ್ಕೆ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ಮತ್ತು ಅದಮಾರು ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದಂಗಳವರು ಸಹಸ್ರ ಕಳಶ ಕ್ಷೀರಾಭಿಷೇಕ ನೆರವೇರಿಸಿದರು.


# ನಗರದೇವತೆ ದುರ್ಗಾಂಬಿಕಾ ದೇವಿ ಜಾತ್ರೆಯ ಶುಭಾಶಯಗಳು

ನಗರ ದೇವತೆ ದುರ್ಗಾಂಬಿಕಾ ದೇವಿಯು ಸರ್ವರಿಗೂ ಆರೋಗ್ಯ ಹಾಗೂ ಸುರಕ್ಷತೆ ತರಲಿ ಎಂದು ಹಾರೈಸುವ...

## ದಾವಣಗೆರೆ ಜಿಲ್ಲಾ ಚಿಟ್‌ಸ್ಟರ್ಸ್ ಸಂಘ (ನೋಂ.,)

ಸಂಪರ್ಕ ವಿಳಾಸ : ಅಂದನೂರು ಚಿಟ್ಸ್ (ರಿ.) #571/ 7 & 8 ಸಪ್ತಗಿರಿ ಬಿಲ್ಡಿಂಗ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2.



ಅಧ್ಯಕ್ಷರು
ಎಂ. ರಂಗರಾವ್
ಭಾಗ್ಯರಂಗ ಚಿಟ್ಸ್ ಪ್ರೈ. ಲಿ.,
ಮೊ. : 99169 59799



ಉಪಾಧ್ಯಕ್ಷರು
ಸತ್ಯನಾರಾಯಣ ಮೂರ್ತಿ ಬಿ.
ನವೋದಯ ಚಿಟ್ ಫಂಡ್ಸ್
ಮೊ. : 99451 59582



ಕಾರ್ಯದರ್ಶಿ
ಅಂದನೂರು ರಾಜೇಶ್
ಅಂದನೂರು ಚಿಟ್ಸ್
ಮೊ. : 98804 88688



ನಿರ್ದೇಶಕರು
ಷಣ್ಮುಖ ರಾಜು ಗುಜ್ಜರ್
ಮಾರುತಿ ಚಿಟ್ ಫಂಡ್ಸ್
ಮೊ. : 94483 39231



ನಿರ್ದೇಶಕರು
ರೆಡ್ಡಯ್ಯ. (ಚಿನ್ನು)
ಶ್ರೀ ವಾಸವಾಂಬ ಚಿಟ್ ಫಂಡ್ಸ್
ಮೊ. : 98862 52456



ನಿರ್ದೇಶಕರು
ಲೋಹಿತ್
ಸ್ಕಂದ ಚಿಟ್ಸ್
ಮೊ. : 80886 96717



ನಿರ್ದೇಶಕರು
ಎ. ಪದ್ಮರಾಜ್
ಗುರು ರಾಘವೇಂದ್ರ ಚಿಟ್ ಫಂಡ್ಸ್
ಮೊ. : 99866 52834



ನಿರ್ದೇಶಕರು
ಅಗಡಿ ಸತೀಶ್
ಶ್ರೀ ಶ್ರೀನಿವಾಸ ಚಿಟ್ ಫಂಡ್ಸ್
ಮೊ. : 94488 50414



ನಿರ್ದೇಶಕರು
ಪಿ. ರವಿ
ಕೆಪಿಆರ್ ಶ್ರೀ ರಕ್ಷಾ ಚಿಟ್ಸ್
ಮೊ. : 78997 74727



ನಿರ್ದೇಶಕರು
ಮಲ್ಲಿಕಾರ್ಜುನ ಸ್ವಾಮಿ
ಶ್ರೀ ಗುರು ಚಿಟ್ ಫಂಡ್ಸ್
ಮೊ. : 97409 51275



ನಿರ್ದೇಶಕರು
ನವೀನ್ ಜೈನ್ ಎಂ.ಎ.
ಶ್ರೀ ಕ್ಷೇತ್ರಪಾಲ್ ಚಿಟ್ಸ್
ಮೊ. : 98451 22279



ನಿರ್ದೇಶಕರು
ಸಿದ್ದಯ್ಯ ಎಂ.ಬಿ.
ಶ್ರೀ ಸಿದ್ದೇಶ್ವರ ಚಿಟ್ಸ್
ಮೊ. : 96325 96688



ನಿರ್ದೇಶಕರು
ಶ್ರೀನಿವಾಸ ರೆಡ್ಡಿ ಎಂ.ವಿ.
ಸಿರಿ ಚಿಟ್ ಫಂಡ್ಸ್
ಮೊ. : 94489 29962

ನಮ್ಮ ದಾವಣಗೆರೆ ಜಿಲ್ಲಾ ಚಿಟ್‌ಸ್ಟರ್ಸ್ ಸಂಘದ ಸದಸ್ಯ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆಯಿರಿ.

ರೂ. 50 ಸಾವಿರಗಳಿಂದ ರೂ. 50 ಲಕ್ಷದವರೆಗೆ ಚೀಟಿಯ ಗುಂಪುಗಳಿವೆ. ನಿಮ್ಮ ಹೂಡಿಕೆಯು ಲಾಭ ಗಳಿಸುವುದು ಗ್ಯಾರಂಟಿ

ವ್ಯರ್ಥಾ ಬಡ್ಡಿ ಕಟ್ಟುವ ಬದಲು ಚೀಟಿ ಕಂತು ಕಟ್ಟಿ ಸಾಲ ತೀರಿಸಿ



ಆರ್‌ಬಿಐ ಹೇಳುತ್ತೇ...! ಜಾಣರಾಗಿರಿ, ಜಾಗರೂಕರಾಗಿರಿ

# ನನ್ನ ಗೆಲುವಿಗೆ ಮೋದಿ ಆಶೀರ್ವಾದ ಮಾಡಿದ್ದಾರೆ



ಗಾಯತ್ರಿ ಸಿದ್ದೇಶ್ವರ

ದಾವಣಗೆರೆ, ಮಾ. 18- ಶಿವಮೊಗ್ಗ ಜಿಲ್ಲೆಯಲ್ಲಿ ಇಂದು ನಡೆದ ಲೋಕಸಭಾ ಚುನಾವಣಾ ಪ್ರಚಾರ ಸಭೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಪಕ್ಕದಲ್ಲೇ ತೆರೆದ ವಾಹನದಲ್ಲಿ ಹೋಗಿದ್ದು ನನ್ನ ಪುಣ್ಯ. ಈ ಮೂಲಕ ಅವರು ನನ್ನ ಗೆಲುವಿಗೆ ಆಶೀರ್ವಾದ ಮಾಡಿದ್ದಾರೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತೆರೆದ ವಾಹನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪಕ್ಕದಲ್ಲಿ ನಿಂತು ಲಕ್ಷಾಂತರ ಜನರ ನಡುವೆ ರ್‍ಯಾಲಿಯಲ್ಲಿ ಹೋಗಲು ನನಗೆ ಅವಕಾಶ ಸಿಕ್ಕಿದ್ದು, ನನ್ನ ಗೆಲುವಿನ ದಿಕ್ಸೂಚಿ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಕೇವಲ ಬಾಯಿ ಮಾತಿನಲ್ಲಿ ಮಹಿಳಾ ಸಬಲೀಕರಣ ಬಗ್ಗೆ ಮಾತನಾಡುವುದಿಲ್ಲ. ಅದನ್ನು ಮಾಡಿ ತೋರಿಸುತ್ತಾರೆ. ಮಹಿಳಾ ಕೋಟಾದಲ್ಲಿ ನನಗೆ ಟಿಕೆಟ್ ಕೊಟ್ಟಿದ್ದಲ್ಲೇ ಅವರ ಪಕ್ಕದಲ್ಲೇ ರ್‍ಯಾಲಿಯಲ್ಲಿ ಭಾಗವಹಿಸಲು ನನಗೆಲ್ಲದೇ ಅವಕಾಶ ಕಲ್ಪಿಸುವ ಮೂಲಕ ಲಕ್ಷಾಂತರ ಮಹಿಳೆಯರಿಗೆ ಗೌರವ ಸೂಚಿಸಿದ್ದಾರೆ. ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನ ಮಂತ್ರಿಯನ್ನಾಗಿ ಮಾಡಲು ಅಹೋರಾತ್ರಿ ಶ್ರಮಿಸುತ್ತೇವೆ ಎಂದು ಹೇಳಿದರು.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿಯೂ ಬಿಜೆಪಿ ಅಲೆ ಜೋರಾಗಿದೆ. ಕಳೆದ 28 ವರ್ಷಗಳಿಂದ ದಾವಣಗೆರೆ ಕ್ಷೇತ್ರ ಬಿಜೆಪಿ ಭದ್ರ ಕೋಟೆಯಾಗಿದೆ. ಈ ಬಾರಿಯೂ ನಾನು ಇಲ್ಲಿಂದ ಕಮಲದ ಹೂವು ಮುಡಿದುಕೊಂಡು ದೆಹಲಿಗೆ ಹೋಗಲು ಜನ ಆಶೀರ್ವಾದ ಮಾಡುತ್ತಿದ್ದಾರೆ. ಇಡೀ ದೇಶ ಸುಭದ್ರ, ಸುಭಿಕ್ಷವಾಗಿ ಇರಬೇಕು. ಅಂದರೆ ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂದು ಎಲ್ಲಾ ವರ್ಗದವರು ಆಶಿಸುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮುಖಂಡರಾದ ಜಿ.ಎಸ್. ಅನಿತ್ ಕುಮಾರ್, ಮಾಜಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣೇಶ್ ಮತ್ತಿತರರಿದ್ದರು.

# ಚುನಾವಣಾ ಅಕ್ರಮಗಳ ಕಣ್ಗಾವಲಿಗೆ, ಜಿಲ್ಲೆಯಲ್ಲಿ 32 ಚೆಕ್ ಪೋಸ್ಟ್‌ಗಳ ಸ್ಥಾಪನೆ



ದಾವಣಗೆರೆ, ಮಾ. 18 - ಲೋಕಸಭಾ ಸಾರ್ವತ್ರಿಕ ಚುನಾವಣೆಯನ್ನು ಪಾರದರ್ಶಕವಾಗಿ ಹಾಗೂ ಮುಕ್ತ, ನ್ಯಾಯಸಮ್ಮತವಾಗಿ ನಡೆಸಲು ಜಿಲ್ಲೆಯ ಗಡಿಭಾಗ ಸೇರಿದಂತೆ, ದಾವಣಗೆರೆ ಜಿಲ್ಲೆಯಲ್ಲಿ 32 ಕಡೆ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದ್ದಾರೆ.

ಪ್ರತಿ ಚೆಕ್‌ಪೋಸ್ಟ್‌ಗಳಲ್ಲಿ ಮೂರು ಜನ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಯೊಂದಿಗೆ ದಿನದ 24 ಗಂಟೆಯು ಕಾವಲು ನಡೆಸುವ ಮೂಲಕ ಅಕ್ರಮವಾಗಿ ಸಾಗಣೆ ಮಾಡುವ ವಸ್ತುಗಳು, ಮದ್ಯ, ನಗದು ಮತ್ತು ಇನ್ನಿತರೆ ಬಂಗಾರದ ವಸ್ತುಗಳ ಮೇಲೆ ನಿಗಾ ಇಡುವರು. ಆ ಮಾರ್ಗದಲ್ಲಿ ಹೋಗುವ ಎಲ್ಲಾ ವಾಹನಗಳನ್ನು ತಪಾಸಣೆ ಮಾಡುವ ಮೂಲಕ ಚುನಾವಣಾ ಅಕ್ರಮಗಳನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರಿಗೆ ಯಾವುದೇ ವಸ್ತುಗಳನ್ನು ಸಾಗಣೆ ಮಾಡಲು ಅಭ್ಯಂತರ ಇರುವುದಿಲ್ಲ, ಆದರೆ ಸಂಬಂಧಿಸಿದ ವಸ್ತುಗಳು, ಹಣ, ಯಾವುದೇ ಇದ್ದಲ್ಲಿ ದಾಖಲೆಗಳು ಅತ್ಯವಶ್ಯಕವಾಗಿದ್ದು ವಾಹನ ಸವಾರರು, ಸಾರ್ವಜನಿಕರು ಚೆಕ್‌ಪೋಸ್ಟ್‌ಗಳಲ್ಲಿ ಹಾಜರುಪಡಿಸುವ ಮೂಲಕ ಸಿಬ್ಬಂದಿಗಳಿಗೆ ಸಹಕರಿಸಬೇಕು.

**ಚೆಕ್‌ಪೋಸ್ಟ್‌ಗಳ ವಿವರ**

**ಜಗಳೂರು ವಿಧಾನಸಭಾ ಕ್ಷೇತ್ರ:** ಬಿದರಕೆರೆ ಹತ್ತಿರ, ಗಡಿಮಾಕುಂಟೆ, ಅರಸೀಕೆರೆ ಠಾಣೆ ವ್ಯಾಪ್ತಿಯ ಕುರೇ ಮಾಗಾನಹಳ್ಳಿ ಹತ್ತಿರ, ಚಳ್ಳಕೆರೆ ರಸ್ತೆ ಮುಸ್ಟೂರು ಹತ್ತಿರ, ಬಿಳಿಚೋಡು ವ್ಯಾಪ್ತಿಯ ಕಾನಕಟ್ಟೆ ಎನ್.ಹೆಚ್.13 ಹತ್ತಿರ.

**ಹರಿಹರ ವಿಧಾನಸಭಾ ಕ್ಷೇತ್ರ:** ಹರಿಹರ ರಾಘವೇಂದ್ರ ಮಠದ ಹತ್ತಿರ, ಹಲಸಬಾಳು ಕ್ರಾಸ್, ಕುರುಬರಹಳ್ಳಿ ಹತ್ತಿರ, ನಂದಿಗುಡಿಯಲ್ಲಿ ಚೆಕ್ ಪೋಸ್ಟ್ ನಿರ್ಮಾಣ ಮಾಡಲಾಗಿದೆ.

**ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ :** ಭೂಮಿಕ ನಗರ, ಲೋಕಿಕೆರೆ ಕ್ರಾಸ್, ಕಲ್ಪನಹಳ್ಳಿ ಸರ್ಕಲ್ (ಮಾಗಾನಹಳ್ಳಿ), ಎನ್.ಹೆಚ್-4 ಶಾಮನೂರು ಕ್ರಾಸ್, ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ಹತ್ತಿರ.

**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ:** ಬಾಡ ಕ್ರಾಸ್, ಬೇತೂರು ರೋಡ್, ಕೊಂಡಜ್ಜಿ ರಸ್ತೆ, ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ಬಳಿ.

**ಮಾಯಕೊಂಡ ವಿಧಾನಸಭಾ ಕ್ಷೇತ್ರ :** ಹೆಬ್ಬಾಳ್ ಟೋಲ್ ಗೇಟ್, ಕಾರಿಗನೂರು ಕ್ರಾಸ್, ಹೆಚ್.ಬಸಾಪುರ.

**ಚನ್ನಗಿರಿ ವಿಧಾನಸಭಾ ಕ್ಷೇತ್ರ:** ಜೋಳದಾಳ್, ಮಾವಿನಕಟ್ಟೆ, ತಾವರೆಕೆರೆ, ಮಾದಾಪುರ, ಸಂತೇಬೆನ್ನೂರು.

**ಹೊನ್ನಾಳಿ ವಿಧಾನಸಭಾ ಕ್ಷೇತ್ರ:** ನ್ಯಾಮತಿ ಪೊಲೀಸ್ ಠಾಣೆಯ ಟಿ.ಜಿ.ಹಳ್ಳಿ ಕ್ರಾಸ್, ಸವಳಂಗ, ಹೊಳೆಹರಳಹಳ್ಳಿ ಕ್ರಾಸ್, ಹೊನ್ನಾಳಿ ಪೊಲೀಸ್ ಠಾಣೆಯ ಗೊಲ್ಲರಹಳ್ಳಿ ಕ್ರಾಸ್, ಕುಳಗಟ್ಟೆ ಕ್ರಾಸ್, ಜೀನಹಳ್ಳಿ ಕ್ರಾಸ್ ಬಳಿ ಚೆಕ್ ಪೋಸ್ಟ್ ನಿರ್ಮಾಣ ಮಾಡಲಾಗಿದೆ.

**ಚೆಕ್‌ಪೋಸ್ಟ್‌ಗಳಿಗೆ ಭೇಟಿ, ಪರಿಶೀಲನೆ ;** ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರು ಹೆಬ್ಬಾಳ್, ಶಾಮನೂರು, ಹರಿಹರ ಸೇರಿದಂತೆ ವಿವಿಧ ಚೆಕ್‌ಪೋಸ್ಟ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲೆಯಲ್ಲಿ ಲೋಕಸಭಾ ಚುನಾವಣೆ ಪ್ರಯುಕ್ತ ಕಣ್ಗಾವಲಿಗಾಗಿ ಸ್ಥಾಪಿಸಿರುವ ಚೆಕ್‌ಪೋಸ್ಟ್‌ಗಳಲ್ಲಿ ಸಿಬ್ಬಂದಿಗಳು ಸರಿಯಾಗಿ ತಮ್ಮ ಕರ್ತವ್ಯ ನಿರ್ವಹಿಸಬೇಕು. ಕರ್ತವ್ಯವನ್ನು ನಿರ್ವಹಿಸುವುದರೊಂದಿಗೆ ಸಾರ್ವಜನಿಕರೊಂದಿಗೆ ಸೌಜನ್ಯಯುತವಾಗಿ ನಡೆದುಕೊಂಡು ಎಲ್ಲಾ ವಾಹನಗಳ ತಪಾಸಣೆ ಮಾಡುವ ಮೂಲಕ ಚುನಾವಣಾ ಅಕ್ರಮಗಳಿಗೆ ಕಡಿವಾಣ ಹಾಕಬೇಕೆಂದು ಸೂಚನೆ ನೀಡಿದರು.

## ದೇವಿ ಜಾತ್ರೆ ನೇರ ಪ್ರಸಾರ

ದಾವಣಗೆರೆ, ಮಾ.18- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಇಂದಿನಿಂದ ಆರಂಭವಾಗಿದ್ದು, ಜಾತ್ರಾ ಕಾರ್ಯಕ್ರಮಗಳ ನೇರ ಪ್ರಸಾರವನ್ನು ಸ್ಥಳೀಯ ವಿಕ್ಟರಿ ಡಿಜಿಟಲ್ ಚಾನಲ್ (ನಂಬರ್ 150)ನಲ್ಲಿ ವೀಕ್ಷಿಸಬಹುದಾಗಿದೆ.

## ವಿವಿಧ ಅಕಾಡೆಮಿಗಳಿಗೆ ನೇಮಕ ಕಲಾವಿದ ಮಹಲಿಂಗಪ್ಪ ಸಂತಸ

ದಾವಣಗೆರೆ, ಮಾ. 18- ವಿವಿಧ ಅಕಾಡೆಮಿಗಳಿಗೆ ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿರುವ ಸದಸ್ಯರುಗಳಿಗೆ ಹಿರಿಯ ಚಿತ್ರ ಕಲಾವಿದರೂ ಆದ ಲಲಿತಕಲಾ ಅಕಾಡೆಮಿ ಮಾಜಿ ಸದಸ್ಯ ಮಹಲಿಂಗಪ್ಪ ಎ. ಅಭಿನಂದನೆ ಸಲ್ಲಿಸಿರುತ್ತಾರೆ. ಪ್ರೊ. ಎ.ಬಿ. ರಾಮಚಂದ್ರಪ್ಪ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಜಾನಪದ ಅಕಾಡೆಮಿ, ವೈ. ಕುಮಾರ್ ಶಿಲ್ಪಕಲಾ ಅಕಾಡೆಮಿ, ಶ್ರೀಮತಿ ಫಾತಿಮಾ, ಚಿತ್ರಕಲಾ ಅಕಾಡೆಮಿ ಮತ್ತು ಲಿಂಗಪ್ಪ ತೋರಣಗಟ್ಟಿ ಬಯಲಾಟ ಅಕಾಡೆಮಿ ಈ ಬಾರಿ ಹೆಚ್ಚು ಸಂಖ್ಯೆಯಲ್ಲಿ ಅಕಾಡೆಮಿಗಳಿಗೆ ನೇಮಕವಾಗಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯ ಎಂದು ಮಹಲಿಂಗಪ್ಪ ಸಂತಸ ವ್ಯಕ್ತಪಡಿಸಿದ್ದಾರೆ.

## ಮಾನವೀಯತೆ ಮೆರೆದ ಡಾ. ರವಿಕುಮಾರ್

ದಾವಣಗೆರೆ, ಮಾ. 18- ಸಮೀಪದ ಗೋಣಿವಾಡದ ಸೋಮೇಶ್ವರ ಸಂಸ್ಥೆಯ ಬಳಿ ಬಿಸಿಲಿನ ಬೇಗೆಯಿಂದ ಬಳಲಿ ರಸ್ತೆ ಬದಿ ನಿಸ್ತೇಜರಾಗಿದ್ದ ಮಹಿಳೆಗೆ ಆರೈಕೆ ಆಸ್ಪತ್ರೆಯ ಮುಖ್ಯಸ್ಥ ಡಾ. ರವಿಕುಮಾರ್ ಟಿ.ಜಿ. ಸಂಜೀವಿನಿಯಾಗಿದ್ದಾರೆ. ಕಾರ್ಯ ನಿಮಿತ್ತ ಡಾ. ರವಿಕುಮಾರ್ ಅವರು ಚನ್ನಗಿರಿಗೆ ತೆರಳವಾಗ ರಸ್ತೆ ಬದಿ ಮಹಿಳೆಯೊಬ್ಬರು ಬೈಕ್ ನಿಲ್ಲಿಸಿ ಕುಳಿತಿದ್ದನ್ನು ಗಮನಿಸಿ, ಕೂಡಲೇ ವಾಹನ ನಿಲ್ಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ನಂತರ ತಮ್ಮ ವಾಹನದಲ್ಲಿ ಕರೆದುಕೊಂಡು ಹೋಗಿ ತಲುಪಿಸಿ ಆರೋಗ್ಯ ದಾಸೋಹ ತತ್ವ ಸಾರಿದ್ದಾರೆ.



## ನಗರದಲ್ಲಿ ಜಾತ್ರೆ : ಮದ್ಯ ಮಾರಾಟ ನಿಷೇಧ

ದಾವಣಗೆರೆ, ಮಾ. 18 - ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಹಾಗೂ ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಈ ಎರಡು ದೇವಸ್ಥಾನಗಳ 500 ಮೀಟರ್ ವ್ಯಾಪ್ತಿಯಲ್ಲಿ ನಾಳೆ ದಿನಾಂಕ 19 ರ ಬೆಳಿಗ್ಗೆ 6 ರಿಂದ ನಾಡಿದ್ದು ದಿನಾಂಕ 20 ರ ಮಧ್ಯರಾತ್ರಿ 12 ರವರೆಗೆ ಮದ್ಯ ಮಾರಾಟ ನಿಷೇಧ ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಆದೇಶಿಸಿದ್ದಾರೆ.

## ತಾರೇಹಳ್ಳಿಯಲ್ಲಿ ನಾಳೆ ರಂಗನಾಥ ಸ್ವಾಮಿ ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಮಹಾರಥೋತ್ಸವವು ನಾಳೆ ಬುಧವಾರ ಸಂಜೆ 6.30ಕ್ಕೆ ನಡೆಯಲಿದೆ. ರಥೋತ್ಸವದ ಪ್ರಯುಕ್ತ ಇಂದು ಗರುಡ ವಾಹನ ಉತ್ಸವ, ನಾಳೆ ಗುರುವಾರ ಅನ್ನ ಸಂತರ್ಪಣೆ, ದಿನಾಂಕ 22ರ ಶುಕ್ರವಾರ ಓಕುಳಿ ಉತ್ಸವ ಜರುಗಲಿದೆ.

## ಜಗಳೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಗಳೂರು ವಿ.ವಿ.ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಜಗಳೂರು ಟೌನ್ ಮತ್ತು ಎಲ್ಲಾ ಗ್ರಾಮಗಳ ಎನ.ಜೆ.ವೈ ಮಾರ್ಗಗಳು ಮತ್ತು ನೀರಾವರಿ ಪಂಪ್ ಸೆಟ್ಟು ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



# ಕನ್ನಡದ ಹಿರಿಮೆ ಹೆಚ್ಚಾಗಲು ಕಿಚ್ಚು - ಅಭಿಮಾನ ಮುಖ್ಯ

ಹರಿಹರ, ಮಾ.18- ನಾಡಿನ ಜನತೆಯಲ್ಲಿ ಕನ್ನಡದ ಕಿಚ್ಚು ಹಾಗೂ ಅಭಿಮಾನ ಹೆಚ್ಚಾದರೆ ಕನ್ನಡದ ಹಿರಿಮೆ ಕೂಡ ಹೆಚ್ಚಾಗುತ್ತದೆ ಎಂದು ತಹಶೀಲ್ದಾರ್ ಗುರುಬಸವರಾಜ್ ಹೇಳಿದರು.

ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ಇಂದು ನಡೆದ 13 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಬಾಲ್ಯದಲ್ಲಿ ಮಕ್ಕಳಿಗೆ ಮಾತೃಭಾಷೆ ಬಗ್ಗೆ ಅಭಿಮಾನ ಮೂಡಿಸಿದರೆ, ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹುಟ್ಟುವುದಕ್ಕೆ ಸಹಕಾರಿಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಕನ್ನಡದ ಬಗ್ಗೆ ಅಭಿಮಾನ ಕಡಿಮೆಯಾಗಿದ್ದು, ಜನರಿಗೆ ಜಾಗೃತಿ ಮೂಡಿಸುವ ಕಾರ್ಯ ಆಗಬೇಕಿದೆ ಎಂದು ಹೇಳಿದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ಹಲವಾರು ವರ್ಷಗಳಿಂದ ಗ್ರಾಮ ಮಟ್ಟದಿಂದ ಹಿಡಿದು ವಿಶ್ವ ಮಟ್ಟದ ವರೆಗೆ ಕನ್ನಡ ಸಮ್ಮೇಳನಗಳು ನಡೆಯುತ್ತಿರುವುದರಿಂದ ಕನ್ನಡವು ಉನ್ನತ ಮಟ್ಟದವರೆಗೆ ಬೆಳೆಯುವುದಕ್ಕೆ ದಾರಿಯಾಗಿ, ಅಂತರ್ಜಾಲದಲ್ಲಿ ಸಾಹಿತ್ಯದ ಕೊರತೆ ಇಲ್ಲದಂತೆ ಆಗಿದೆ.

ಆ ನಿಟ್ಟಿನಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕಸಾಪ ಸದಸ್ಯರು ಎರಡು ದಿನಗಳ ಕಾಲ ಸಮ್ಮೇಳನ ಆಯೋಜಿಸುವುದರೊಂದಿಗೆ ಕನ್ನಡವನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿಸುವ ಮತ್ತು ಬೆಳಸುವಂತಹ ಕಾರ್ಯವನ್ನು ಮಾಡಿ ಯಶಸ್ವಿಗೊಳಿಸಲು ಶ್ರಮಿಸಿದ್ದು ಶ್ಲಾಘನೀಯ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಪರಿಷತ್ತಿನ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಸಿ.ವಿ. ಪಾಟೀಲ್, ದಾವಣಗೆರೆ ಶಿಕ್ಷಣ ಇಲಾಖೆಯ ಪರಿವೀಕ್ಷಕರಾದ ಎನ್. ಪಿ. ಮಂಜುಳಾ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ದಿಳ್ಳೆಪ್ಪ, ರೇವಣಸಿದ್ದಪ್ಪ, ರಾಘವೇಂದ್ರ ನಾಯರಿ, ಸಿ.ಜಿ. ಜಗದೀಶ್ ಕೂಲಂಬಿ, ಜಿಗಳಿ ಪ್ರಕಾಶ್, ಎಂ. ಚಿದಾನಂದ ಕಂಚಿಕೇರಿ, ಬಿ.ಬಿ. ರೇವಣ್ಣನಾಯ್ಕ್, ರಿಯಾಜ್ ಅಹ್ಮದ್, ವಿ.ಬಿ. ಕೊಟ್ರೇಶ್, ಸದಾನಂದ ಕುಂಬಳೂರು, ಪಿ. ಪ್ರಕಾಶ್, ವೀರೇಶ್ ಪ್ರಸಾದ್, ಗಣಪತಿ ಮಾಳಂಜೆ, ಗೀತಾ ಕೊಂಡಜ್ಜಿ, ಹೆಚ್, ಹಾಲಪ್ಪ, ಕೆ.ಆರ್. ಮಂಜುನಾಥ್, ಕರಿಬಸಪ್ಪ ಕುಪ್ಪೇಲೂರು, ಡಿ.ಎನ್. ಶಿವಮ್ಮ, ಪ್ರಕಾಶ್, ಜೆ.ಎಂ. ಗುರುಬಸವರಾಜ್, ಮಲ್ಲಿಕಾರ್ಜುನ್, ಜಿ.ಎಸ್. ನಾಗರಾಜ್, ವಿಜಯಕುಮಾರ್ ಓಲೇಕರ್, ಸಲಾಂಸಾಬ್, ಶಾಂತಕುಮಾರಿ, ಸೀತಾ ನಾರಾಯಣ, ಸಿದ್ದಮ್ಮ, ಸುಮಂಗಳ ಇತರರು ಹಾಜರಿದ್ದರು.

## ಒಗ್ಗಟ್ಟಿನಿಂದ ಮತ್ತೊಮ್ಮೆ ಮೋದಿ ಗೆಲ್ಲಿಸೋಣ

ದಾವಣಗೆರೆ, ಮಾ.18- ಪಕ್ಷದ ಅಭ್ಯರ್ಥಿ ಯಾರೇ ಆಗಿರಲಿ, ಹೈಕಮಾಂಡ್ ತಿರ್ಮಾನಕ್ಕೆ ಬದ್ಧರಾಗಿ, ಮತ್ತೊಮ್ಮೆ ಮೋದಿ ಅವರನ್ನು ಗೆಲ್ಲಿಸೋಣ ಎಂದು ಶೋಷಿತ, ಹಿಂದುಳಿದ ವರ್ಗಗಳ ಮುಖಂಡ ಬಾಡದ ಆನಂದರಾಜು ತಿಳಿಸಿದ್ದಾರೆ.

ಜಿ.ಮಲ್ಲಿಕಾರ್ಜುನಪ್ಪ ಅವರ ಕಾಲದಿಂದ ಇಂದಿನ ಸಂಸದರವರೆಗೆ, ಜಿಲ್ಲೆಯಲ್ಲಿ ಜಿ.ಎಂ ಕುಟುಂಬ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದೆ ಎಂದು ಅವರು ಹೇಳಿದ್ದಾರೆ.

ಸಂಸದ ಸಿದ್ದೇಶ್ವರ ಅವರು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಉತ್ತಮ ಕೆಲಸ ಮಾಡಿರುವ ಕಾರಣ, ಇದೀಗ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರರಿಗೆ ಟಿಕೆಟ್ ನೀಡಿರುವುದು ಸಂತಸವಿದೆ.

## ಶ್ರೀ ದುಗ್ಗಮ್ಮ ಜಾತ್ರೆ : ವಾಸವಿ ಸಂಘದಿಂದ ಮಜ್ಜಿಗೆ

ಶ್ರೀ ದುರ್ಗಾಂಬಿಕ ದೇವಿ ಜಾತ್ರೆಯ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 24ರ ಭಾನುವಾರದವರೆಗೆ (ಬುಧವಾರ ಹೊರತುಪಡಿಸಿ) ಬೆಳಿಗ್ಗೆ 11 ಗಂಟೆಯಿಂದ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸಲಾಗುವುದು ಎಂದು ವಾಸವಿ ಯುವಜನ ಸಂಘದ ಅಧ್ಯಕ್ಷ ಎಸ್. ಸುನಿಲ್ ತಿಳಿಸಿದ್ದಾರೆ.

## ತೆಲಂಗಾಣ ರಾಜ್ಯಪಾಲೆ ರಾಜೀನಾಮೆ

ಹೈದರಾಬಾದ್, ಮಾ. 18 - ತೆಲಂಗಾಣ ರಾಜ್ಯಪಾಲೆ ತಮಿಳಸೈ ಸೌಂದರರಾಜನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪುದುಚೆರಿಯ ಲೆಫ್ಟಿನೆಂಟ್ ಗವರ್ನರ್ ಸಹ ಆಗಿರುವ ಸೌಂದರಾಜನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜೀನಾಮೆ ನೀಡಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸೌಂದರ ರಾಜನ್ ಅವರು ತಮಿಳುನಾಡಿನಿಂದ ಸ್ಪರ್ಧಿಸಲಿದ್ದಾರೆ ಎನ್ನಲಾಗುತ್ತಿದೆ.

### ಓದುಗರ ಪತ್ರ

## ರಾಜ್ಯದಲ್ಲಿ ಕುಟುಂಬ ರಾಜಕಾರಣದ ವಿಜೃಂಭಣೆ

ಮಾನ್ಯರೇ,

ಕರ್ನಾಟಕ ಲೋಕಸಭಾ ಚುನಾವಣೆಯ ಎಲ್ಲ ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಗಮನಿಸಿದಾಗ, ರಾಜಕೀಯ ನಾಯಕರ ಕುಟುಂಬ ಸದಸ್ಯರಾದ ಅಪ್ಪ-ಮಗ, ಗಂಡ-ಹೆಂಡತಿ, ಅಪ್ಪ-ಮಗಳು, ಭಾವ-ಮೈದುನ ಈ ರೀತಿಯ ಹೆಸರುಗಳು ಚಾಲ್ತಿಯಲ್ಲಿರುವುದು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷದಲ್ಲೂ ಕಂಡು ಬರುತ್ತಿದೆ.

ಕುಟುಂಬ ರಾಜಕಾರಣ ಪೋಷಿಸುತ್ತಿರುವ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡುತ್ತಿವೆ. ಸಾಮಾನ್ಯ ಜನರು, ಕಾರ್ಯಕರ್ತರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿಲ್ಲದ ಹಾಗೆ ಈ ರಾಜಕೀಯ ಪಕ್ಷಗಳು ನಡೆದುಕೊಳ್ಳುತ್ತಿವೆ. ಹಣದ ಪ್ರಭಾವ ಮತ್ತು ಕುಟುಂಬ ರಾಜಕಾರಣ, ಪ್ರಜಾಪ್ರಭುತ್ವಕ್ಕೆ ಮಾರಕವಾಗಿವೆ.

ಹಣದ ಪ್ರಭಾವ ಇಂದಿನ ದಿನಮಾನಗಳಲ್ಲಿ ಪಕ್ಷವನ್ನು ನಿಯಂತ್ರಣ ಮಾಡುತ್ತಿರುವುದರಿಂದ ಪ್ರಜ್ಞಾವಂತರು, ಬುದ್ದಿಜೀವಿಗಳು ಮತ್ತು ಸಾಮಾನ್ಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವೇ ಇಲ್ಲದಂತಾಗಿ, ಪ್ರಜಾಪ್ರಭುತ್ವಕ್ಕೆ ಅರ್ಥವೇ ಇಲ್ಲದಂತಾಗಿದೆ.

ಬೀದರ್ ನಿಂದ ಚಾಮರಾಜನಗರದವರೆಗಿನ ಸುಮಾರು 20 ಕ್ಷೇತ್ರಗಳಲ್ಲಿ, 2 ಪಕ್ಷಗಳ ಅಭ್ಯರ್ಥಿ ಪಟ್ಟಿಯಲ್ಲಿ ಕುಟುಂಬದ ಸದಸ್ಯರೇ ಹೆಚ್ಚಿನ ಸ್ಥಾನ ಪಡೆದಿರುವುದು ಆತಂಕದ ವಿಷಯವಾಗಿದೆ.

ಯಾವ ನಾಯಕನು ಕೂಡ ಕುಟುಂಬದ ಸದಸ್ಯರನ್ನು ಹೊರತುಪಡಿಸಿ, ಕಾರ್ಯಕರ್ತರ ಮತ್ತು ಪ್ರಜ್ಞಾವಂತರ ಹೆಸರು ಸೂಚಿಸಲು ತಯಾರಿಲ್ಲ. ಏಕೆಂದರೆ 'ರಾಜಕೀಯ' ಹಣ ಉತ್ಪಾದನೆಯ ಕಾರ್ಖಾನೆಯೆಂದು ತಿಳಿದಿರುವುದರಿಂದ ಕುಟುಂಬ ರಾಜಕೀಯ ರಾರಾಜಿಸುತ್ತಿದೆ.

ರಾಷ್ಟ್ರೀಯ ಪಕ್ಷಗಳಿಗೆ ಮಾನ ಮರ್ಯಾದೆ ಇದ್ದರೆ ಪ್ರಾಮಾಣಿಕ ಕಾರ್ಯಕರ್ತರನ್ನು ಗುರುತಿಸಿ ಪ್ರಜಾಪ್ರಭುತ್ವ ಎತ್ತಿ ಹಿಡಿಯುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವ ನಾಶವಾಗುವ ದಿನಗಳು ದೂರವಿಲ್ಲ.

- ಎಂ.ಟಿ. ಸುಭಾಷ್‌ಚಂದ್ರ,
ಅಧ್ಯಕ್ಷರು, ಸಮತಾ ಸಾಂಸ್ಕೃತಿಕ ವೇದಿಕೆ, ದಾವಣಗೆರೆ.

## ನಗರದ ಸಹ್ಯಾದ್ರಿ ಚಿಟ್ಸ್ ಗೆ ರಾಜ್ಯ ಪ್ರಶಸ್ತಿ



ದಾವಣಗೆರೆ, ಮಾ. 18- ನಗರದ ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಪ್ರೈಡ್ ಇಂಡಿಯಾ ಅವಾರ್ಡ್ಸ್ ಸಂಸ್ಥೆಯು ಬೆಂಗಳೂರಿನ ತಾಜ್ ಹೋಟೆಲ್ ನಲ್ಲಿ ಆಯೋಜಿಸಿದ್ದ ಎಕ್ಸಲೆನ್ಸ್ ಬಿಸಿನೆಸ್ ಅವಾರ್ಡ್ಸ್ ನಲ್ಲಿ 2024ನೇ ಸಾಲಿನ ಮೋಸ್ಟ್ ಟ್ರಸ್ಟೆಡ್ ಚಿಟ್ ಫಂಡ್ ಕಂಪನಿ ಪ್ರಶಸ್ತಿ ನೀಡಿದೆ.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಟಿ.ಎಸ್. ಬದರಿನಾಥ್, ಮಾರುಕಟ್ಟೆ ನಿರ್ದೇಶಕ ಶಿವರಾಜ್ ಉಡುಗಣಿ, ಮ್ಯಾನೇಜಿಂಗ್ ಡೈರೆಕ್ಟರ್ ರಮೇಶ್ ಭಟ್, ನಿರ್ದೇಶಕರಾದ ಜಿ.ವಿಜಯಕುಮಾರ್, ಸುನಿಲ್ ಕುಮಾರ್, ರವಿ ಮುಲಾನಿ, ಮಧುಕರ್ ಶೆಟ್ಟಿ, ವೆಂಕಟೇಶ್ ಹೆಚ್.ಎಸ್., ದ್ವಾರಕನಾಥ್ ಬಾಬು, ಅನೂಪ್, ನಳಿನಿ, ಹಾಜರಿದ್ದರು.

## ಚೆಕ್ ಪೋಸ್ಟ್‌ನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ರೂ. 3.89 ಲಕ್ಷ ನಗದು ವಶ

ದಾವಣಗೆರೆ, ಮಾ. 18 - ಲೋಕಿಕೆರೆ ಚೆಕ್ ಪೋಸ್ಟ್‌ನಲ್ಲಿ ಮುಖ್ಯಸ್ಥರಾದ ಮಲ್ಲಿಕಾರ್ಜುನ ಅವರ ನೇತೃತ್ವದಲ್ಲಿ ಎಸ್.ಎಸ್.ಟಿ. ತಂಡದಿಂದ 3,89,780/- ರೂ. ನಗದು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ತಿಳಿಸಿದ್ದಾರೆ.

## ಅಂಚೆ : ಡಾಕ್ ಅದಾಲತ್

ದಾವಣಗೆರೆ ಮಾ.18- ಸಾರ್ವಜನಿಕರ ಮತ್ತು ಅಂಚೆ ಗ್ರಾಹಕರ ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಪಡೆಯಲು ಇದೇ ದಿನಾಂಕ 20 ರಂದು ಸಂಜೆ 4 ಗಂಟೆಗೆ ದಾವಣಗೆರೆ ಅಂಚೆ ಅಧೀಕ್ಷಕರ ಕಚೇರಿ, ಪ್ರಧಾನ ಅಂಚೆ ಕಚೇರಿಯ ಮೊದಲನೇ ಮಹಡಿ, ಗಡಿಯಾರ ಕಂಬದ ಹತ್ತಿರ ಮಂಡಿಪೇಟೆ ಇಲ್ಲಿ ಡಾಕ್ ಅದಾಲತ್ ನಡೆಸಲಾಗುವುದು ಎಂದು ಅಂಚೆ ಅಧೀಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ.

# ಚುನಾವಣಾ ಬಾಂಡ್ ಪೂರ್ಣ ವಿವರ ಬಿಡುಗಡೆಗೆ ಸುಪ್ರೀಂ ಕೋರ್ಟ್ ಆದೇಶ

ನವದೆಹಲಿ, ಮಾ. 18 - ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಆಯ್ದ ಮಾಹಿತಿಯನ್ನಷ್ಟೇ ಬಿಡುಗಡೆ ಮಾಡುವುದನ್ನು ನಿಲ್ಲಿಸಬೇಕು. ಚುನಾವಣಾ ಬಾಂಡ್ ಕುರಿತ ವಿವರಗಳನ್ನು ಮಾರ್ಚ್ 21ರ ಒಳಗೆ ಸಂಪೂರ್ಣ ಬಿಡುಗಡೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ತಿಳಿಸಿದೆ.

ಬಾಂಡ್‌ಗಳ ವಿಶಿಷ್ಟ ಸಂಖ್ಯೆಗಳನ್ನು ಬಿಡುಗಡೆ ಮಾಡುವುದರಿಂದ ಬಾಂಡ್ ಖರೀದಿದಾರರು ಹಾಗೂ ಅದನ್ನು ಪಡೆದ ರಾಜಕೀಯ ಪಕ್ಷಗಳ ನಡುವಿನ ಸಂಬಂಧ ಬಯಲಾಗಲಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಈ ಬಗ್ಗೆ ಸೂಚನೆ ನೀಡಿದ್ದು, ಎಸ್.ಬಿ.ಐ. ಬಾಂಡ್‌ಗಳಿಗೆ ಸಂಬಂಧಿಸಿದಂತೆ ತನ್ನ ಬಳಿ ಇರುವ ಎಲ್ಲಾ ವಿವರಗಳನ್ನು ಬಹಿರಂಗ ಮಾಡಬೇಕು ಎಂದು ತಿಳಿಸಿದೆ.

ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನ, ಬಿ.ಆರ್. ಗವಾಯಿ, ಜೆ.ಬಿ. ಪರ್ದಿವಾಲ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ. ಬಾಂಡ್‌ಗಳಿಗೆ ಸಂಬಂಧಿಸಿದಂತೆ ಎಸ್.ಬಿ.ಐ.ಗೆ ಸುಪ್ರೀಂ ಕೋರ್ಟ್ ಚಾಟಿ ಬೀಸುತ್ತಿರುವುದು ಮೂರನೇ ಬಾರಿ.

ಆದರೆ, ಮಾರ್ಚ್ 1, 2018ರಿಂದ ಏಪ್ರಿಲ್ 11, 2019ರ ನಡುವೆ ಬಿಡುಗಡೆ ಮಾಡಲಾದ ಚುನಾವಣಾ ಬಾಂಡ್‌ಗಳ ಕುರಿತು ವಿವರ ಬಹಿರಂಗ ಪಡಿಸಬೇಕು ಎಂಬ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

# ಅಪ್ರಾಪ್ತರಿಗೆ ವಂಚನೆ ಆರೋಪ ಹೊರಗಿನ ವ್ಯಾಪಾರಿಗಳಿಗೆ ನಿರ್ಬಂಧ

ಪಿತೋರ್‌ಘರ್, ಮಾ. 18 - ಅಪ್ರಾಪ್ತ ಬಾಲಕಿಯರನ್ನು ಮದುವೆಯಾಗುವುದಾಗಿ ಹೇಳಿ ವಂಚಿಸಿದ ಪ್ರಕರಣ ಉತ್ತರಾಖಂಡದ ಹೊರಗಿನ ವ್ಯಾಪಾರಿಗಳಿಗೆ ಮುಳುವಾಗಿದೆ. ಈ ಘಟನೆಯಿಂದ ಅಸಮಾಧಾನಗೊಂಡ ಉತ್ತರಾಖಂಡದ ಸ್ಥಳೀಯ ವ್ಯಾಪಾರಿಗಳ ಒಕ್ಕೂಟ, ಹೊರಗಿನ 91 ವ್ಯಾಪಾರಿಗಳ ಸದಸ್ಯತ್ವ ರದ್ದುಗೊಳಿಸಿದೆ.

ಉತ್ತರಾಖಂಡದ ಧರ್ಚುಲಾದಲ್ಲಿ ಕಳೆದ ಮೂರು ದಿನಗಳಿಂದ ಹೊರಗಿನ ವ್ಯಾಪಾರಿಗಳ ಅಂಗಡಿಗಳ ಬಾಗಿಲು ತೆರೆದಿಲ್ಲ. ಈ ಅಂಗಡಿಗಳು ಬಾಗಿಲು ತೆರೆಯಬಾರದು ಎಂದು ವ್ಯಾಪಾರ ಸಂಘ ಹೇಳಿದೆ. ಈ ರೀತಿಯ ವ್ಯಾಪಾರಿಗಳ ಬಾಡಿಗೆ ಕರಾರು ರದ್ದುಗೊಳಿಸಬೇಕು ಎಂದು ಮಳಿಗೆಗಳ ಮಾಲೀಕರಿಗೂ ತಿಳಿಸಲಾಗಿದೆ.

ಹೊರಗಿನವರ ಅಂಗಡಿಗಳನ್ನು ಬಂದ್ ಮಾಡಿರುವವರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ. ಯಾವುದೇ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ. ಹೊರಗಿನ ವ್ಯಾಪಾರಿಗಳಿಗೆ ಪೂರ್ಣ ರಕ್ಷಣೆ ನೀಡಲಾಗುವುದು ಎಂದು ಪಿತೋರ್‌ಘರ್ ಜಿಲ್ಲಾಧಿಕಾರಿ ರೀನಾ ಜೋಷಿ ತಿಳಿಸಿದ್ದಾರೆ.

ರಾಜ್ಯದ ಒಳಗಿನವರಿಗೆ ಮಾತ್ರ ಸಂಘದ ಸದಸ್ಯತ್ವ ನೀಡಲು ನಿರ್ಧರಿಸಿದ್ದೇವೆ ಎಂದು ಧರ್ಚುಲ ವ್ಯಾಪಾರ ಸಂಘ ತಿಳಿಸಿದೆ.

ಹೊರಗಿನ ವ್ಯಾಪಾರಿಗಳು ಇಲ್ಲಿಗೆ ಬಂದು ಅಪರಾಧಿಕ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ. ಇದು ಸೂಕ್ಷ್ಮ ಗಡಿ ನಗರವಾಗಿದೆ ಎಂದು ಸಂಘದ ಕಾರ್ಯದರ್ಶಿ ಮಹೇಶ್ ಗರ್ಬಿಯಾಲ್ ಹೇಳಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ಉತ್ತರ ಪ್ರದೇಶದ ಬರೈಲಿಯ ಇಬ್ಬರು ವರ್ತಕರು ಸ್ಥಳೀಯ ಇಬ್ಬರು ಅಪ್ರಾಪ್ತಬಾಲಕಿಯರನ್ನುಮದುವೆಯಾಗುವುದಾಗಿ ಹೇಳಿ ಕರೆದೊಯ್ದಿದ್ದರು. ಬಾಲಕಿಯರನ್ನು ರಕ್ಷಿಸಲಾಗಿದ್ದು, ಘಟನೆಗೆ ಕಾರಣರಾದವರನ್ನು ಬಂಧಿಸಲಾಗಿದೆ. ನಂತರ ಹೊರಗಿನ ವ್ಯಾಪಾರಿಗಳ ವಿರುದ್ಧ ನಗರದಲ್ಲಿ ಆಕ್ರೋಶ ಮಡುಗಟ್ಟಿದೆ.

# ನಗರದಲ್ಲಿ ರಸ್ತೆ ಬದಿ ನಿಂತಿದ್ದ ಕಾರ್‌ಗೆ ಬೆಂಕಿ





ದಾವಣಗೆರೆ, ಮಾ. 18- ನಗರದ ಹದಡಿ ರಸ್ತೆಯ ವಿಶಾಲ್ ಮಾರ್ಟ್ ಎದುರು ನಿಲ್ಲಿಸಿದ್ದ ಕಾರೊಂದರಲ್ಲಿ ಬೆಂಕಿ ಕಾಣಿಸಿಕೊಂಡು, ಕಾರು ಬಹುತೇಕ ಸುಟ್ಟು ಕರಕಲಾದ ಘಟನೆ ಸೋಮವಾರ ಮಧ್ಯಾಹ್ನ 1.20ರ ವೇಳೆ ನಡೆದಿದೆ.

ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ನಾಗಾನಾಯ್ಕ್ ಅವರು ವಿಶಾಲ್ ಮಾರ್ಟ್‌ನಲ್ಲಿ ಬಟ್ಟೆ ಖರೀದಿಗೆಂದು ಕಾರು ಪಾರ್ಕ್ ಮಾಡಿದ್ದರು. ತುಸು ಹೊತ್ತಿನಲ್ಲಿಯೇ ಕಾರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ವಿಶಾಲ್ ಮಾರ್ಟ್ ಬಳಿ ಇದ್ದ ಕೆಲವರು ಕಾರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದನ್ನು ಮಾರ್ಟ್ ಸಿಬ್ಬಂದಿಗಳಿಗೆ ತಿಳಿಸಿದ್ದಾರೆ. ಕೂಡಲೇ ಸಿಬ್ಬಂದಿಗಳು ಬೆಂಕಿ ನಂದಿಸಲು ಯತ್ನಿಸಿದರಾದರೂ, ಬೆಂಕಿ ಹೆಚ್ಚಾಗಿದ್ದರಿಂದ ನಂದಿಸುವಲ್ಲಿ ವಿಫಲರಾಗಿದ್ದಾರೆ. ನಂತರ ಅಗ್ನಿ ಶಾಮಕದಳಕ್ಕೆ ಕರೆ ಮಾಡಿದ್ದಾರೆ. ಅಗ್ನಿಶಾಮಕ ದಳದವರು ಆಗಮಿಸಿ ಬೆಂಕಿ ನಂದಿಸಿದ್ದಾರೆ. ಶಾರ್ಟ್ ಸರ್ಕ್ಯೂಟ್‌ನಿಂದ ಕಾರ್‌ಗೆ ಬೆಂಕಿ ಹತ್ತಿರಬಹುದು ಎಂದು ಅಂದಾಜಿಸಲಾಗಿದೆ.

'ಸರ್.ಎಂ.ವಿ. ಕಾಲೇಜಿನಲ್ಲಿ ನನ್ನ ಮಗ ದ್ವಿತೀಯ ಪಿಯು ಓದುತ್ತಿದ್ದು, ಪರೀಕ್ಷೆ ಮುಗಿದ ಮೇಲೆ ಮಗನನ್ನು ಕರೆದುಕೊಂಡು ಹೋಗಬೇಕಿತ್ತು. ಈ ವೇಳೆ ಒಂದಿಷ್ಟು ಬಟ್ಟೆ ಕೊಂಡುಕೊಳ್ಳಲು ವಿಶಾಲ್ ಮಾರ್ಟ್‌ಗೆ ಬಂದಿದ್ದೆ. ರಸ್ತೆಯಲ್ಲಿ ಕಾರ್‌ಗೆ ಬೆಂಕಿ ಹತ್ತಿದೆ ಎಂಬ ಸುದ್ದಿ ತಿಳಿದು ಹೊರ ಬರುವಷ್ಟರಲ್ಲಿ ಕಾರು ಪೂರ್ಣ ಬೆಂಕಿಗೆ ಆಹುತಿಯಾಗಿತ್ತು' ಎಂದು ಮಾಲೀಕ ನಾಗಾನಾಯ್ಕ ನೋವು ತೋಡಿಕೊಂಡರು.

## ಎಸ್.ಎಸ್. ಕೇರ್ ಟ್ರಸ್ಟ್‌ನಿಂದ ಜನತೆಗೆ ಟ್ಯಾಂಕರ್‌ನಲ್ಲಿ ಉಚಿತ ನೀರು ಪೂರೈಕೆ



ದಾವಣಗೆರೆ, ಮಾ.18 - ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಹಾಗೂ ಬೇಸಿಗೆ ಹಿನ್ನೆಲೆಯಲ್ಲಿ ಎಸ್.ಎಸ್.ಕೇರ್ ಟ್ರಸ್ಟ್‌ನಿಂದ ಜನತೆಗೆ ಟ್ಯಾಂಕರ್ ಮೂಲಕ ಉಚಿತ ನೀರು ಪೂರೈಕೆ ಮಾಡಲಾಗುವುದು ಎಂದು ಟ್ರಸ್ಟ್‌ನ ಮುಖ್ಯಸ್ಥರೂ, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ.

ಇಂದಿನಿಂದ ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ ಈ ಕೆಳಗೆ ಕೊಟ್ಟಿರುವ ನಂಬರ್‌ಗಳಿಗೆ ಫೋನ್ ಮಾಡಿದಲ್ಲಿ ತಮ್ಮ ಮನೆಯ ಬಾಗಿಲಿಗೆ ನೀರು ಸರಬರಾಜು ಮಾಡಲಾಗುವುದು. ಒಟ್ಟಾರೆ ಆರು ಟ್ಯಾಂಕರ್‌ಗಳನ್ನು ನೀರು ಪೂರೈಕೆಗೆ ನೀಡಲಾಗಿದ್ದು, ನಾಗರಿಕರು ಯಾರಿಗೂ ಹಣ ನೀಡದೆ ಈ ಸೌಲಭ್ಯ ಪಡೆಯಬಹುದು ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ನಾಗರಿಕರಿಗೆ ಅನೇಕ ಸವಲತ್ತುಗಳನ್ನು ನೀಡಿರುವ ಎಸ್.ಎಸ್.ಕೇರ್ ಟ್ರಸ್ಟ್ ಈ ಉಚಿತ ನೀರು ಪೂರೈಸುವ ಮಹತ್ವದ ನಿರ್ಧಾರ ಕೈಗೊಂಡಿದೆ ಎಂದು ಶಿವಶಂಕರಪ್ಪ ಅವರು ತಿಳಿಸಿದ್ದಾರೆ. ನೀರಿನ ಟ್ಯಾಂಕರ್‌ಗಾಗಿ ಸಂಪರ್ಕಿಸುವ ನಂಬರ್‌ಗಳು: 08192-222014, 80504 10555.


## ನಂದಿಗುಡಿಯಲ್ಲಿ ಇಂದು ರಥೋತ್ಸವ, ಅಡ್ಡಪಲ್ಲಕ್ಕಿ ಉತ್ಸವ



ಮಲೇಬೆನ್ನೂರು ಸಮೀಪದ ನಂದಿ ಗುಡಿ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವ ಇಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದೆ.

ಇದಕ್ಕೂ ಮುನ್ನ ಬೆಳಿಗ್ಗೆ 8.30 ರಿಂದ ರುದ್ರ ಗುಗ್ಗಳ ಹಾಗೂ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವವು ಸಕಲ ವಾದ್ಯಗಳೊಂದಿಗೆ ನಡೆಯಲಿದೆ.

ಸಂಜೆ ದೊಡ್ಡ ಬಂಡಿ ಪ್ರದರ್ಶನ, ರಾತ್ರಿ 8 ಗಂಟೆಗೆ ಓಕುಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು. ಬುಧವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ಬಸವೇಶ್ವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆ ಇರುತ್ತದೆ.

ನಗರದೇವತೆ ಶ್ರೀ ದುರ್ಗಾಂಬಿಕಾದೇವಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುತ್ತಿರುವ ಸರ್ವ ಭಕ್ತಾದಿಗಳಿಗೆ ಹಾರ್ದಿಕ ಶುಭಾಶಯಗಳು

**ಹಣ ಉಳಿತಾಯ ಮಾಡಿ ಚಿನ್ನ-ಬೆಳ್ಳಿ ನಿಮ್ಮದಾಗಿಸಿಕೊಳ್ಳಿ... !**

ಪ್ರತಿ ತಿಂಗಳು ಹಣ ಉಳಿತಾಯ ಮಾಡುವುದರ ಮೂಲಕ ಚಿನ್ನ - ಬೆಳ್ಳಿ ಖರೀದಿಯ ಕನಸನ್ನು ನನಸಾಗಿಸಿಕೊಳ್ಳಿ.
ಪ್ರತಿ ತಿಂಗಳು ರೂ. 500/- ರಿಂದ ರೂ. 8,000/-ವರೆಗೆ ಕಂತಿನ ಹಣವನ್ನು 11 ತಿಂಗಳು ಕಟ್ಟಿದ್ದಲ್ಲಿ 1 ತಿಂಗಳ ಬೋನಸ್ ಸೇರಿ, 12 ತಿಂಗಳ ನಂತರ ಆ ಮೌಲ್ಯಕ್ಕೆ ತಕ್ಕಂತೆ ಬೆಳ್ಳಿ ಅಥವಾ ಬಂಗಾರದ ಆಭರಣವನ್ನು ಕೊಡಲಾಗುವುದು.

ವಿವರಗಳಿಗಾಗಿ ಸಂಪರ್ಕಿಸಿ :
**ಪಾಂಡುರಂಗ ಬೊಮ್ಮಯ್ಯ ವೆರ್ಣೇಕರ್**
(ಪಾಂಡುರಂಗಪ್ಪನವರ ಬೆಳ್ಳಿ-ಬಂಗಾರದ ಅಂಗಡಿ)
#18, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ - 577001.
ದೂರವಾಣಿ : 99728-75535, 96322-76593

YOGI RAM SHASHI EDUCATIONAL TRUST (R)
**LALITHA PRE UNIVERSITY COLLEGE**
**LALITHA INTERNATIONAL PUBLIC SCHOOL**
LOKIKERE MAIN ROAD, DAVANAGERE - 577 005.

**WANTED**

| SUBJECTS | QUALIFICATION | EXPERIENCE |
|---|---|---|
| | PUC SECTION | |
| PHYSICS | M.Sc., B.Ed. | Min. 5 YEARS |
| CHEMISTRY | M.Sc., B.Ed. | Min. 5 YEARS |
| MATHEMATICS | M.Sc., B.Ed. | Min. 5 YEARS |
| BOTONY | M.Sc., B.Ed. | Min. 5 YEARS |
| ZOOLOGY | M.Sc., B.Ed. | Min. 5 YEARS |
| ENGLISH | M.A., B.Ed., | Min. 5 YEARS |
| PHYSICAL INSTRUCTOR | M.P. Ed., | Min. 3 YEARS |
| WARDENS | BA / B.Sc. B.Ed., | Min. 3 YEARS |
| | SCHOOL SECTION | |
| ENGLISH/SOCIAL MATHS/SCIENCE | B.Sc./M.Sc./ B.Ed., | Min. 3 YEARS |

Note : 1) Fluency in English is a must.
2) Minimum 3 years experience in an English Medium School is mandatory
3) Candidates who is selected must sign in an agreement for 2 years.
4) Recruited science Lecturers must deal with CET/NEET/JEE coaching along with the completion of PU Board syllabus

Contact : 7022004042 / 7022004109 / 9980629965


## ಶ್ಯಾಬನೂರಿನಲ್ಲಿ ಇಂದು ರಥೋತ್ಸವ



ದಾವಣಗೆರೆ - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇಂದು ಮಧ್ಯರಾತ್ರಿ 12 ಗಂಟೆಗೆ ಜರುಗಲಿದೆ.

ನಾಳೆ ಬುಧವಾರ ಬೆಲ್ಲದ ಬಂಡಿ ಉತ್ಸವ, ದಿನಾಂಕ 21ರ ಗುರುವಾರ ಓಕುಳಿ ಕಾರ್ಯಕ್ರಮ ನಡೆಯಲಿದೆ.

## ಸಿಇಟಿ, ನೀಟ್ : ಎಬಿವಿಪಿ ತರಬೇತಿ

ದಾವಣಗೆರೆ, ಮಾ.17 - ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ದೃಶ್ಯಕಲಾ ಮಹಾವಿದ್ಯಾಲಯದ ಫೈನ್ ಆರ್ಟ್ಸ್ ಕಾಲೇಜಿನಲ್ಲಿ ಇದೇ ದಿನಾಂಕ 28 ರಿಂದ ಉಚಿತ ಸಿಇಟಿ ಮತ್ತು ನೀಟ್ ತರಬೇತಿ ಪ್ರಾರಂಭವಾಗಲಿದೆ.

ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 4ರ ವರೆಗೆ ಅನುಭವಿ ಪ್ರಾಧ್ಯಾಪಕರಿಂದ ಹೊಸ ಪಠ್ಯಕ್ರಮದ ಪ್ರಕಾರ ಬೋಧನೆ ನೀಡಲಾಗುತ್ತದೆ. ಹೆಸರು ನೋಂದಾಯಿಸಲು ಇದೇ ದಿನಾಂಕ 20 ಕೊನೆ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.9880544153 ಸಂಪರ್ಕಿಸುವಂತೆ ಮಂಜುನಾಥ ಕೊಳ್ಳೇರ ತಿಳಿಸಿದ್ದಾರೆ.


**SCIENCE ACADEMY (R.)**
(A UNIQUE CENTRE FOR P.U. CLASSES)
# 307 / 2B, I FLOOR, 2ND MAIN, P.J. EXTN, NEAR STADIUM, DAVANGERE – 4

**ADMISSION STARTED FOR**
**CET-NEET**
**CRASH COURSE**
**Classes start from 21ST March 2024**

- Subject Experts will engage the classes.
- Well prepared and designed study material will be given.
- Alternate day's tests and exams will be conducted.
- Even an average student can also understand the classes easily.
- Limited seats only, Hurry up…

For more Details contact:
Office: 08192 – 457761
Mobile: 9980368779, 9448178087

"We don't have any other branches in Davangere in the name of Academy".



**ಭಾವಪೂರ್ಣ ಶ್ರದ್ಧಾಂಜಲಿ**

ಶಿಕ್ಷಣ, ಸಮಾಜ ಸೇವೆಯ ಜೊತೆಗೆ
ಸ್ತ್ರೀ ಸ್ವಾವಲಂಬನೆಯ ಹಣತೆ ಬೆಳಗಿದ
ಮಾಜಿ ಶಿಕ್ಷಣ ಸಚಿವರಾದ
**ಡಾ. ನಾಗಮ್ಮ ಕೇಶವಮೂರ್ತಿಯವರು**
ತಮ್ಮ ಬದುಕನ್ನೇ ಸ್ತ್ರೀ ಕುಲದ ಏಳಿಗೆಗೆ
ಸಮರ್ಥಿಸಿಕೊಂಡವರು. ಧೀರೋದಾತ್ತ
ಸಮಾಜಸೇವಕಿ, ಅಪ್ರತಿಮ ಜನನಾಯಕಿಯಾದ
ನಾಗಮ್ಮನವರು ನಮ್ಮನ್ನೆಲ್ಲಾ ಅಗಲಿದ್ದು,
ಈ ಮಹಾನ್ ಚೇತನಕ್ಕೆ ನಮ್ಮೆಲ್ಲರ
ಹೃದಯಪೂರ್ವಕ ಶ್ರದ್ಧಾಂಜಲಿಗಳು...



**ಶ್ರೀಮತಿ ಶಶಿಕಲಾ ಇ.ಆರ್.**
ಅಧ್ಯಕ್ಷರು, ಶಶಿ ಎಜುಕೇಷನಲ್ ಟ್ರಸ್ಟ್ (ರಿ.)
ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್
ಲಲಿತಾ ಪದವಿ ಪೂರ್ವ ಕಾಲೇಜ್ ಹಾಗೂ ಸಿಬ್ಬಂದಿ ವರ್ಗ
ಲೋಕಿಕೆರೆ ರೋಡ್, ದಾವಣಗೆರೆ.
ಫೋ. : 70220 04042, 70220 04109, 99806 29965





KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas